ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ


ಮಾಸಪತ್ರಿಕೆ – 15 ಜುಲೈ 2022

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-22 ಸಂಚಿಕೆ-7 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶೃಂಗೇರಿ ಜಗದ್ಗುರುಗಳ ದಿವ್ಯ ಉಪಸ್ಥಿತಿಯಲ್ಲಿ
# ಬೆಂಗಳೂರಿನ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಬ್ರಹ್ಮಕುಂಭಾಭಿಷೇಕ


ದಿನಾಂಕ 19.06.2022ರ ಭಾನುವಾರ ದಂದು ಬೆಂಗಳೂರಿನ ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಬ್ರಹ್ಮಕುಂಭಾಭಿಷೇಕ ಹಾಗೂ ನವಗ್ರಹ ಪ್ರತಿಷ್ಠಾಪನೆಗಳನ್ನು ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಶ್ರೀಮದ್ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳು ತಮ್ಮ ದಿವ್ಯಹಸ್ತಗಳಿಂದ ನೆರವೇರಿಸಿದರು. ಆ ಸಂದರ್ಭದಲ್ಲಿ ಶಿಷ್ಯವೃಂದವನ್ನು ಉದ್ದೇಶಿಸಿ ಮಾಡಿದ ಅನುಗ್ರಹ ಭಾಷಣದಲ್ಲಿ ಶ್ರೀ ಶ್ರೀಗಳು "ಒಂದೊಂದು ಸಂದರ್ಭದಲ್ಲಿ ಭಗವಂತ ಒಂದೊಂದು ರೂಪದಲ್ಲಿ ಅವತಾರ ಎತ್ತಿ ದುಷ್ಟರನ್ನು ಸಂಹಾರ ಮಾಡಿ ಲೋಕವನ್ನು ಉದ್ಧರಿಸಿದ್ದಾನೆ. ಪರಮಾತ್ಮನಲ್ಲಿ ಯಾವುದೇ ಬೇಧಭಾವ ಇಲ್ಲ. ರೂಪ ಬೇರೆ ಬೇರೆಯಾದರೂ ದೇವರ ಚೈತನ್ಯ ಒಂದೇ ಆಗಿರುತ್ತದೆ. ಸುಬ್ರಹ್ಮಣ್ಯನ ಪೂಜೆ ಅನಾದಿಕಾಲದಿಂದಲೂ ಬಂದಿದೆ. ದೇವರ ಅನುಗ್ರಹದಿಂದ ಅಸಾಧ್ಯವಾದ ಕೆಲಸಗಳು ಸಾಧ್ಯವಾಗಿವೆ. ಹೀಗಾಗಿ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಭಗವಂತನ ಆರಾಧನೆ ಮಾಡಬೇಕು" ಎಂದು ಹೇಳಿದರು.

"ವಿಶೇಷವಾಗಿ ಶೃಂಗೇರಿ ಪೀಠಕ್ಕೆ ಸ್ಥಾನಿಕ ಸಮಾಜದವರು ಪ್ರೀತಿಯ ಶಿಷ್ಯಂದಿರು. ಇದು ಅತ್ಯಂತ ಸಂತೋಷವಾಗಿರುವ ವಿಷಯ. ಪ್ರತಿವರ್ಷ ಚಾತುರ್ಮಾಸ್ಯದ ಸಮಯದಲ್ಲಿ ಗುರುಗಳ ಆಶೀರ್ವಾದಕ್ಕೆ ಶೃಂಗೇರಿಗೆ ಬರುತ್ತಿರುವ ಈ ಸಮಾಜದ ಮೇಲೆ ನಮಗೆ ವಿಶೇಷ ವಾತ್ಸಲ್ಯವಿದೆ. ನಮ್ಮ ಶಿಷ್ಯರು ಚೆನ್ನಾಗಿರಬೇಕು. ಅವರಿಗೆ ಒಳ್ಳೆಯದಾಗಬೇಕು ಎಂದು ನಾವು ಪೂಜೆ ಮಾಡುವಾಗ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇವೆ. ಗುರುಗಳು ಸದಾ ಕಾಲ ಶಿಷ್ಯರ ಹಿತವನ್ನು ಬಯಸುತ್ತಿದ್ದರೆ ಶಿಷ್ಯರು ಸದಾ ಕಾಲ ಗುರುಗಳ ಸೇವೆಯನ್ನು ಬಯಸುತ್ತಿರುತ್ತಾರೆ. ಇಂತಹ ವಿಶಿಷ್ಟವಾದ ಮಧುರ ಸಂಬಂಧ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೂ, ಶೃಂಗೇರಿ ಪೀಠಕ್ಕೂ ಇದೆ. ಸ್ಥಾನಿಕ ಬಾಂಧವರ ಅನೇಕ ವರ್ಷದ ಪ್ರಾರ್ಥನೆ ಇಂದು ಸಂಪನ್ನವಾಯಿತು. ತಾವೆಲ್ಲರೂ ಹಲವು ಬಾರಿ ನಮ್ಮಲ್ಲಿಗೆ ಬಂದು ಮನವಿ ಮಾಡಿದಾಗ ನಾವೇ ಬಂದು ಬ್ರಹ್ಮಕುಂಭಾಭಿಷೇಕವನ್ನು ಮಾಡುತ್ತೇವೆ ಎಂದು ತಿಳಿಸಿದ್ದೆವು. ಅದರಂತೆ ಇಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಬ್ರಹ್ಮಕುಂಭಾಭಿಷೇಕ ನೆರವೇರಿದೆ. ಸ್ಥಾನಿಕ ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕು. ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದೇ ಐಕ್ಯಮತ್ಯದಿಂದ ಮುನ್ನಡೆಯಬೇಕು" ಎಂದು ಆಶೀರ್ವಚನ ನೀಡಿದರು. ಗುರುಗಳು ಆಶೀರ್ವಾದ ನೀಡಿದ ಬಳಿಕ ಶಿಷ್ಯರಿಗೆ ಮಂತ್ರಾಕ್ಷತೆಯನ್ನು ನೀಡಿದರು.

**ಪೂರ್ವಸಿದ್ಧತೆ :**

ಬ್ರಹ್ಮಕುಂಭಾಭಿಷೇಕದ ಸಿದ್ಧತೆಯ ನಿಮಿತ್ತ ದಿನಾಂಕ 03.04.2022ರಂದು ಸಮಾಜದ ಬಾಂಧವರ ಜೊತೆ ಸಭೆ ನಡೆಸಲಾಗಿತ್ತು. ಸಭೆ ನಡೆಸುವುದಕ್ಕೂ ಮುನ್ನ ಬ್ರಹ್ಮಕಲಶ ಕಾರ್ಯಕ್ರಮ ಮತ್ತು "ಜ್ಞಾನಶಕ್ತಿ ವಿಷನ್ 2025" ಯಶಸ್ವಿಯಾಗಲಿ ಎಂದು ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿಯ ಮುಂದೆ ಪ್ರಾರ್ಥನೆ ಮಾಡಲಾಗಿತ್ತು. ಪ್ರಾರ್ಥನೆಯನ್ನು ಮಾಡಿದಾಗ ಸುಬ್ರಹ್ಮಣ್ಯ ಸ್ವಾಮಿಯು ಪುಷ್ಪಪ್ರಸಾದವನ್ನು ಕರುಣಿಸುವ ಮೂಲಕ ಈ ದೊಡ್ಡ ಯೋಜನೆಗೆ ಹರಸಿ ಅನುಗ್ರಹ ನೀಡಿದರು.

**ಗಾಯತ್ರಿ ಹೋಮ :**

ಜೂನ್ 15ರ ಬೆಳಗ್ಗೆ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದ ವೈದಿಕ ತಂಡ ಕೋಡಿಗೆಹಳ್ಳಿಗೆ ಆಗಮಿಸಿತು. ಮೆರವಣಿಗೆಯ ಮೂಲಕ ಪೂರ್ಣಕುಂಭ ಸ್ವಾಗತದೊಂದಿಗೆ ವೈದಿಕ ತಂಡವನ್ನು ದೇವಸ್ಥಾನಕ್ಕೆ ಸ್ವಾಗತಿಸಲಾಯಿತು. ಇದಾದ ಬಳಿಕ ಯಾಗ ಶಾಲೆಯಲ್ಲಿ ನಿರ್ಮಾಣ ಗೊಂಡ 6 ಯಜ್ಞ ಕುಂಡಗಳಲ್ಲಿ ಗಾಯತ್ರಿ ಹೋಮ ಆರಂಭವಾಯಿತು.

(3ನೇ ಪುಟಕ್ಕೆ...)

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.
ಫೋನ್ : 0820–2958444, 8971185844

ಆತ್ಮೀಯ ಸಮಾಜ ಬಾಂಧವರೇ,

ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

### ನಾಗರಪಂಚಮಿ

ತಾ.02-08-2022ನೇ ಮಂಗಳವಾರ
ಸಮಯ : ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00ರ ತನಕ

### ವರಮಹಾಲಕ್ಷ್ಮೀ ವ್ರತ

ತಾ.05-08-2022ನೇ ಶುಕ್ರವಾರ
ಸಂಜೆ 5-00ರಿಂದ
(ಫಲಾಹಾರದ ವ್ಯವಸ್ಥೆ ಇದೆ)

### ಹೂವಿನ ಪೂಜೆ

(ಮಹಿಳಾ ವೇದಿಕೆಯ ವತಿಯಿಂದ)
ತಾ.02-09-2022ನೇ ಶುಕ್ರವಾರ
ಸಮಯ : ಸಂಜೆ 5-00 ಗಂಟೆಗೆ

### ಋಗುಪಾಕರ್ಮ

ತಾ.08-09-2022ನೇ ಗುರುವಾರ
ಸಮಯ : ಬೆಳಿಗ್ಗೆ 10-00ರಿಂದ ಅಪರಾಹ್ನ 12-15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

### ಶೃಂಗೇರಿಯಲ್ಲಿ ಗುರುಗಳ ಭೇಟಿ

ತಾ.28-08-2022ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7-30 ಗಂಟೆಗೆ ಶ್ರೀ ಶಾರದಾ ಮಂಟಪದಿಂದ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಅಂದಾಜು ವೆಚ್ಚ ಒಬ್ಬರಿಗೆ ರೂ.400. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಕಾರ್ಯದರ್ಶಿ ಶ್ರೀ ಪಿ.ಪ್ರಭಾಕರ ಭಂಡಿ (9449254846) ಅಥವಾ ಜೊತೆ ಕಾರ್ಯದರ್ಶಿ ಶ್ರೀ ವಿನೋದ್ ಕುಮಾರ್ (9964896319) ಇವರನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

| | | |
|---|---|---|
| ಶ್ರೀ ಪಿ. ಪ್ರಭಾಕರ ಭಂಡಿ | ಶ್ರೀ ಕೆ. ಗಣೇಶ್ ಹೆಬ್ಬಾರ್ | ಶ್ರೀ ಕೆ. ಮಂಜುನಾಥ ಹೆಬ್ಬಾರ್ |
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಉಡುಪಿ ಇವರಿಂದ ಬೆಂಗಳೂರಿನಲ್ಲಿ ಯಕ್ಷಗಾನ ಪ್ರದರ್ಶನ







ಉಡುಪಿಯ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಾದ ನಮಗೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಕೋಡಿಗೆಹಳ್ಳಿ ಇದರ ಬ್ರಹ್ಮಕಲಶೋತ್ಸವಕ್ಕೆ ಯಕ್ಷಗಾನ ಪ್ರದರ್ಶನ ನೀಡಲು ಅವಕಾಶ ದೊರಕಿದ ಸಂದರ್ಭ ಬಹಳ ಉತ್ಸಾಹದಿಂದ ತಯಾರಿಗಳನ್ನೆಲ್ಲ ಮಾಡಿಕೊಂಡು ದಿನಾಂಕ 16.06.2022ರ ಬೆಳಗ್ಗಿನ ಟ್ರೈನ್ ಹಿಡಿದು ಉಡುಪಿಯಿಂದ ಹೊರಟೆವು. ಬೆಂಗಳೂರಿನಲ್ಲಿ ಯಕ್ಷಗಾನ ಪ್ರದರ್ಶನ ನೀಡಲು ಹೊರಟಿದ್ದೇವೆ ಎಂದು ನಮ್ಮ ಎಲ್ಲಾ ಸಂಬಂಧಿಕರಿಗೆ ಹಾಗೂ ಗೆಳೆಯರಿಗೆ ತಿಳಿಸಬೇಕು ಎನ್ನುವ ಹಂಬಲ. ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ತಿಳಿಸಲಾಗದಿದ್ದರೂ ಆದಷ್ಟು ಜನರಿಗೆ ತಿಳಿಸಿದ್ದೆವು. ಇನ್ನು ನಾವು ಈಗಿನ ಕಾಲದ ಮಕ್ಕಳಾದ್ದರಿಂದ ಸೋಶಿಯಲ್ ಮೀಡಿಯಾ ಅಂದರೆ ವಾಟ್ಸ್‌ಅಪ್, ಇನ್‌ಸ್ಟಾಗ್ರಾಂ ಇದರಲ್ಲಿ ಎಲ್ಲಾ ನಮ್ಮ ಫೋಟೋಸ್ ಅಪ್‌ಲೊಡ್ ಮಾಡುವ ಕಾತುರ. ಎಲ್ಲರೂ ಜೊತೆಯಾಗಿ ಸೆಲ್ಫಿ ತೆಗೆದು ವಾಟ್ಸ್‌ಅಪ್ ಇನ್‌ಸ್ಟಾಗ್ರಾಂನ್‌ಲ್ಲಿ ಅಪ್‌ಲೋಡ್ ಮಾಡಿದೆವು. ಉಡುಪಿಯಿಂದ ಹೊರಟ ಬಳಿಕ ಮಂಗಳೂರು ಸ್ಟೇಷನ್‌ನಲ್ಲಿ ಟ್ರೈನ್ 20 ನಿಮಿಷ ನಿಂತಾಗ ಎಲ್ಲರೂ ಕೆಳಗಿಳಿದು ಟೀ ಕುಡಿದು ತಿಂಡಿ ತೆಗೆದುಕೊಂಡು ಹಂಚಿಕೊಂಡು ತಿಂದೆವು. ಮಂಗಳೂರಿನಲ್ಲಿ ಜೊತೆಯಾಗಿ ಒಂದು ಸೆಲ್ಫಿ ತೆಗೆದ ನಂತರ ಟ್ರೈನ್‌ನಲ್ಲಿ ಕುಳಿತುಕೊಂಡು ನಮ್ಮ ಪ್ರದರ್ಶನಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಎಲ್ಲರೂ ತಮ್ಮ ತಮ್ಮ ಅರ್ಥ ಕಲಿಯಲು ಪ್ರಾರಂಭಿಸಿದೆವು. ಸ್ವಲ್ಪ ಹೊತ್ತು ಎಲ್ಲರೂ ತಮ್ಮ ಅರ್ಥ ಕಲಿತು

(5ನೇ ಪುಟಕ್ಕೆ...)

ಸಂಪಾದಕ ಮಂಡಳಿ
ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ| ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★
ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಅಲೆವೂರು ಶ್ರೀನಿವಾಸ ರಾವ್ ಇವರಿಗೆ ರಾಜ್ಯಮಟ್ಟದ ಸರ್ವೋತ್ತಮ ಸೇವಾ ಪುರಸ್ಕಾರ



ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯ ಸರ್ಕಾರಿ ನೌಕರರಿಗೆ ಕೊಡಲಾಗುವ ರಾಜ್ಯಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಈ ಸಾಲಿಗೆ ಉಡುಪಿ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿಯಾದ ಎ. ಶ್ರೀನಿವಾಸ ರಾವ್ ಆಯ್ಕೆಯಾಗಿರುತ್ತಾರೆ. ಸದರಿಯುವರು ಸರ್ಕಾರಿ ಸೇವೆಯಲ್ಲಿ ಮಾಡಿದ ಗಣನೀಯ ಸಾಧನೆಗಳನ್ನು ಹಾಗೂ ಅತ್ಯುತ್ತಮ ಸೇವೆಗಳನ್ನು ಗುರುತಿಸಿ ಈ ಪುರಸ್ಕಾರ ನೀಡಲಾಗಿದೆ.

ಉಡುಪಿ ಜಿಲ್ಲೆಯಲ್ಲಿ “ತ್ಯಾಜ್ಯವನ್ನು ಸಂಪನ್ಮೂಲ”ವೆಂದು ಗುರುತಿಸಿ ತ್ಯಾಜ್ಯವನ್ನು ಆದಾಯದ ಚಟುವಟಿಕೆಯಾಗಿ (ಎಸ್.ಎಲ್.ಆರ್.ಎಂ) ಪರಿವರ್ತಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ದೇಶದಲ್ಲಿಯೇ ಹೆಸರುಗಳಿಸಿರುತ್ತಾರೆ. ಕಾರ್ಕಳದ ನಿಟ್ಟೆ ಗ್ರಾಮ ಪಂಚಾಯತ್‌ನಲ್ಲಿ ಗ್ರಾಮೀಣ ಭಾರತದ ಮೊದಲ ಘನ ತ್ಯಾಜ್ಯ ನಿರ್ವಹಣಾ ಘಟಕ ಆರಂಭಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಎಲ್ಲಾ ಕಾರ್ಯಕ್ರಮದ ಅನುಷ್ಠಾನದ ಅಧಿಕಾರಿಯಾಗಿ ಎ.ಶ್ರೀನಿವಾಸ ರಾವ್ ಇವರು ನೀಡಿದ ಕೊಡುಗೆಯನ್ನು ಗುರುತಿಸಿ ಈ ಪುರಸ್ಕಾರ ನೀಡಲಾಗಿದೆ. ಇದಲ್ಲದೇ 2008ರಲ್ಲಿ ಪ್ರಕಟವಾದ ಜಿಲ್ಲಾ ಮಾನವ ಅಭಿವೃದ್ಧಿ ವರದಿಯಲ್ಲಿ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಅಭಿವೃದ್ಧಿ ಸೂಚಕಗಳನ್ನು ಗ್ರಾಮಪಂಚಾಯತ್ ಮಟ್ಟಕ್ಕೆ ತಯಾರಿಸಿದ್ದು, ಈ ವರದಿಗೆ ವಿಶ್ವಸಂಸ್ಥೆಯ ಯು.ಎನ್.ಡಿ.ಪಿ. ಪುರಸ್ಕಾರ ಬಂದಿರುತ್ತದೆ. ಆ ವರದಿ ತಯಾರಿಯಲ್ಲಿನ ಎ. ಶ್ರೀನಿವಾಸ ರಾವ್ ಇವರ ಪಾತ್ರ. ಕೊಡಗು ಹಾಗೂ ಉಡುಪಿ ಜಿಲ್ಲೆಯಲ್ಲಿ ರಾಜ್ಯಾದಾಯ ಅಂದಾಜುಗಳನ್ನು ಮೊದಲ ಬಾರಿಗೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕ್ರೋಢಿಸಿರುವುದು. ತಳಮಟ್ಟದಲ್ಲಿ ಯೋಜನೆ ತಯಾರಿ ಅನುಷ್ಠಾನದಲ್ಲಿ ವಿನೂತನ ವಿಧಾನಗಳ ಅಳವಡಿಕೆ ಇತ್ಯಾದಿಗಳಿಂದ ಇವರು ಹೆಸರುವಾಸಿಯಾಗಿದ್ದು, ಆ ಸಾಧನೆಗಳನ್ನು ಗುರುತಿಸಲಾಗಿದೆ.

ಸದರಿಯುವರು ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿದ್ದು, ರಾಜ್ಯ ಮಟ್ಟದ ವಿವಿಧ ಉನ್ನತ ಸಮಿತಿಗಳ ಸದಸ್ಯರಾಗಿ ಅನುಭವ ಹೊಂದಿರುತ್ತಾರೆ. ಇತ್ತೀಚೆಗೆ ನವದೆಹಲಿಯ ವಿಜ್ಞಾನಭವನದಲ್ಲಿ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ವಿಷಯ ಮಾಡಿರುತ್ತಾರೆ. ಮೇಲಿನ ಸಾಧನೆಗಳನ್ನು ತನ್ನ ದೈನಂದಿನ ಕೆಲಸಕಾರ್ಯಗಳೊಂದಿಗೆ ಮಾಡುವ ಜೊತೆಯಲ್ಲಿ ಸಾರ್ವಜನಿಕ ಕುಂದುಕೊರತೆ ನಿವಾರಣೆ, ಸಮಸ್ಯೆಗಳಿಗೆ ಸ್ಪಂದನೆ, ಕರ್ತವ್ಯ ನಿಷ್ಠೆಯಿಂದ ಹೆಸರುವಾಸಿಯಾಗಿರುತ್ತಾರೆ.

ಇವರು ಉಡುಪಿ ಜಿಲ್ಲೆ, ಕೊಡಗು ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಸೇವೋತ್ತಮ ಪುರಸ್ಕಾರ ಪಡೆದಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ “ಗೃಹ ಸಾಲ” ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | |
|---|---|
| ಗೃಹ ಸಾಲ | : 10% |
| ವಾಹನ ಸಾಲ | : 12.5% |
| ಹಳೆಯ ವಾಹನ | : 15% |
| ಆಭರಣ ಸಾಲ | : 12% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 12% |
| ಅಡಮಾನ ಸಾಲ | : 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

PRODUCTS ARE AVAILABLE AT ATTRACTIVE DISCOUNT PRICES



BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala



ಡಾ| ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು
Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com
Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಬೆಂಗಳೂರಿನ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಬ್ರಹ್ಮಕುಂಭಾಭಿಷೇಕ

■...1ನೇ ಪುಟದಿಂದ

ಪ್ರತಿಯೊಂದು ಹೋಮಕುಂಡದಲ್ಲಿ ಯಜಮಾನಕರ್ತೃಗಳಾಗಿ 6 ಮಂದಿ ಭಾಗವಹಿಸಲು ಅವಕಾಶ ಇದ್ದುದರಿಂದ 6 ಹೋಮಕುಂಡಗಳಲ್ಲಿ ನಡೆದ ಗಾಯತ್ರಿ ಹೋಮ ಕಾರ್ಯದಲ್ಲಿ 36 ಮಂದಿ ಯಜಮಾನಕರ್ತೃಗಳಾಗಿ ಭಾಗವಹಿಸಿ ಶ್ರೀ ಗಾಯತ್ರೀದೇವಿಯ ಕೃಪೆಗೆ ಪಾತ್ರರಾದರು. ಗಾಯತ್ರಿ ಹೋಮ ನಡೆಯುತ್ತಿದ್ದಂತೆ ಇನ್ನೊಂದು ಕಡೆಯಲ್ಲಿ ಸಮಾಜದ ಮಹಿಳೆಯರು ಸೌಂದರ್ಯ ಲಹರಿ ಪಾರಾಯಣ ಮಾಡಿ ದೇವರ ಕೃಪೆಗೆ ಪಾತ್ರರಾದರು. ಅದಕ್ಕಾಗಿ ಒಂದು ತಿಂಗಳ ಮೊದಲೇ ಅಕ್ಷರ ಲಕ್ಷ (24 ಲಕ್ಷ) ಗಾಯತ್ರಿ ಜಪ ಮಾಡುವ ಸಂಕಲ್ಪ ಮಾಡಲಾಗಿತ್ತು. ಸಮಾಜದ 100ಕ್ಕೂ ಹೆಚ್ಚಿನ ಬಾಂಧವರು ಪ್ರತಿ ನಿತ್ಯ 1000 ಗಾಯತ್ರಿ ಜಪ ಮಾಡುವುದರ ಮೂಲಕ 25 ಲಕ್ಷ ಗಾಯತ್ರಿ ಜಪವನ್ನು ಮಾಡಲಾಗಿತ್ತು.

**ಹೊರೆ ಕಾಣಿಕೆ :**

ಬೆಂಗಳೂರಿನ ವಿವಿಧ ಭಾಗಗಳಲ್ಲಿ ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮದ ಸಂಬಂಧವಾಗಿ "ಸ್ಪಂದನ" ಕಾರ್ಯಕ್ರಮವನ್ನು ನಡೆಸಲಾಗಿತ್ತು. ಯಾವ ಭಾಗದಲ್ಲಿ ಸ್ಪಂದನ ಮಾಡಲಾಗಿತ್ತೋ ಆ ಭಾಗದ ಬಾಂಧವರು ನೀಡಿದ ತರಕಾರಿ, ಆಹಾರ ಸಾಮಾಗ್ರಿಗಳನ್ನು ವಾಹನದಲ್ಲಿ ತುಂಬಿಸಿ ಬುಧವಾರ ಮಧ್ಯಾಹ್ನ ಚೆಂಡೆ ವಾದ್ಯಗಳ ನಾದ, ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಭಜನಾ ಮಂಡಳಿಯ ಸದಸ್ಯರ ಭಜನೆಗಳೊಂದಿಗೆ ಮಾಗಡಿ ಮುಖ್ಯರಸ್ತೆಯಿಂದ ಮೆರವಣಿಗೆಯ ಮೂಲಕ ದೇವಸ್ಥಾನಕ್ಕೆ ತರಲಾಯಿತು.

ಜೂನ್ 15ರ ಬುಧವಾರ ಸಂಜೆಯಿಂದ ಆರಂಭಗೊಂಡ ಧಾರ್ಮಿಕ ಕಾರ್ಯಕ್ರಮಗಳು ಜೂನ್ 19ರ ಭಾನುವಾರದಂದು ಮಕ್ತಾಯಗೊಂಡವು. ಜೂನ್ 17ರಂದು ಮಯೂರಬಿಂಬಪ್ರತಿಷ್ಠೆ, ಚಂಡಿಕಾಹೋಮ, ಲಕ್ಷಪುಷ್ಪಾರ್ಚನೆ ನಡೆದರೆ ಜೂನ್ 18 ರಂದು ನಾಗದೇವರ ಸನ್ನಿಧಿಯಲ್ಲಿ ನವಕಲಶಪೂಜೆ, ಅಧಿವಾಸಹೋಮ, ಆಶ್ಲೇಷಾಬಲಿ, ನವಗ್ರಹಬಿಂಬಗಳ ಶಯ್ಯಾಧಿವಾಸ ಪ್ರತಿಷ್ಠಾಪೂರ್ವ ವಿಧಿಗಳು, ಕಲಶ ಸ್ಥಾಪನೆಯಂತಹ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಜೂನ್ 19ರ ಭಾನುವಾರದಂದು ಬೆಳಗ್ಗೆ 7.35ರ ಶುಭ ಮಿಥುನ ಲಗ್ನದಲ್ಲಿ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನವಗ್ರಹ ದೇವತಾ ಬಿಂಬಪ್ರತಿಷ್ಠೆ, ಕಲಾಶಾಭಿಷೇಕ ನಡೆಯಿತು.

**ಶ್ರೀಗಳ ಆಗಮನ :**

ಭಾನುವಾರ ಮಧ್ಯಾಹ್ನ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಶ್ರೀ ಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳು ಶ್ರೀಕ್ಷೇತ್ರಕ್ಕೆ ಆಗಮಿಸಿದರು. ಶ್ರೀಗಳು ಆಗಮಿಸುತ್ತಿದ್ದಂತೆ ಜನರು ರಸ್ತೆಯ ಎರಡೂ ಬದಿಯಲ್ಲಿ ನಿಂತು ಸ್ವಾಗತ ಕೋರಿದರು. ಶ್ರೀಗಳಿಗೆ ಪೂರ್ಣಕುಂಭ ಸ್ವಾಗತವನ್ನು ನೀಡಲಾಯಿತು. ಈ ವೇಳೆ ಚೆಂಡೆ, ವಾಲಗದವರ ಜೊತೆ ಮಹಿಳೆಯರು ಭಜನೆ ಮಾಡಿದರು. ಋತ್ವಿಜರು ವೇದ ಮಂತ್ರಗಳನ್ನು ಪಠಿಸಿದರು. ಗುರುಗಳ ಧೂಳೀ ಪಾದಪೂಜೆ ಮುಗಿದ ಬಳಿಕ ಬ್ರಹ್ಮಕುಂಭಾಭೀಷೇಕಕ್ಕೆ ಕ್ಷಣಗಣನೆ ಆರಂಭವಾಯಿತು.

**ಶ್ರೀಗಳಿಂದ ಬ್ರಹ್ಮಕುಂಭಾಭಿಷೇಕ:**

ಶ್ರೀಗಳು ದೇವಸ್ಥಾನಕ್ಕೆ ತೆರಳಿ ಪೂಜೆ ಮಾಡಿ ಸುಬ್ರಹ್ಮಣ್ಯ ಸ್ವಾಮಿಗೆ ಅಭಿಷೇಕ ಮಾಡಿದರು. ದೇವಸ್ಥಾನದ ಒಳಗಿನ ಪೂಜೆಗಳು ಮುಗಿದ ಬಳಿಕ ನೇರವಾಗಿ ಶಿಖರ ಅಭಿಷೇಕ ಮಾಡಲು ಮೆಟ್ಟಿಲು ಹತ್ತಿದರು. ಶಿಖರ ಅಭಿಷೇಕ ಮಾಡಲೆಂದೇ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಮೆಟ್ಟಿಲುಗಳನ್ನು ಏರಿದ ಶ್ರೀಗಳು ಸುಬ್ರಹ್ಮಣ್ಯ ಸ್ವಾಮಿಯ ಮೇಲಿರುವ ಶಿಖರಕ್ಕೆ ಕುಂಭಾಭಿಷೇಕ ಮಾಡಿದರು. ಮೇಲುಗಡೆ ಹೋಗಲು ಎಲ್ಲರಿಗೂ ಸಾಧ್ಯವಾಗದ ಕಾರಣ ಮೂರು ದೊಡ್ಡ ಸ್ಕ್ರೀನ್‌ಗಳಲ್ಲಿ ಲೈವ್ ಟಿವಿಯನ್ನು ಹಾಕಲಾಗಿತ್ತು.

ಶೃಂಗೇರಿ ಶ್ರೀಗಳು ಈ ಕಾರ್ಯಕ್ರಮ ಮುಗಿಸಿದ ಬಳಿಕ ನೇರವಾಗಿ ಅಂದು ಪ್ರತಿಷ್ಠಾಪನೆಗೊಂಡಿದ್ದ ನವಗ್ರಹ ಮೂರ್ತಿಗಳಿರುವ ಗುಡಿಗಳಿಗೆ ತೆರಳಿ ಪೂಜೆ ಮಾಡಿದರು. ಇದಾದ ಬಳಿಕ ವೇದಿಕೆಯ ಕಾರ್ಯಕ್ರಮಕ್ಕೆ ಆಗಮಿಸಿದರು. ವೇದಿಕೆಯ ಮೇಲೆ ಶ್ರೀಗಳು ಮಾತ್ರ ಆಸೀನರಾಗಿದ್ದರೆ ಎಬಿಎಸ್‌ಬಿಎಸ್ ಕಾರ್ಯಕಾರಿ ಸಮಿತಿ ಅಧ್ಯಕ್ಷರು, ಸದಸ್ಯರು, ಬ್ರಹ್ಮಕುಂಭಾಭಿಷೇಕಕ್ಕೆ ಸಂಬಂಧಿಸಿದ ಎಲ್ಲಾ ಸಮಿತಿಯ ಮುಖ್ಯಸ್ಥರು ಕೆಳಗಡೆ ಆಸೀನರಾಗಿದ್ದರು. ಈ ಸಂದರ್ಭದಲ್ಲಿ ಬೆಂಗಳೂರಿನ ಸಂಘದಲ್ಲಿ ಸುದೀರ್ಘ ಕಾಲ ಅಧ್ಯಕ್ಷರಾಗಿ ಹಾಗೂ ಅನೇಕ ಜವಾಬ್ದಾರಿಯನ್ನು ವಹಿಸಿ, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಶ್ರೀ ಅಜ್ಜಾವರ ಶಿವರಾಯರನ್ನು ಸನ್ಮಾನಿಸಲಾಯಿತು. ತಮ್ಮ ಅನುಗ್ರಹ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಶ್ರೀಗಳು, ಇಂದು ಸನ್ಮಾನ ನಡೆಯಲಿದೆ ಎಂಬ ವಿಷಯ ಸ್ವತ: ಶಿವರಾಯರಿಗೆ ಗೊತ್ತಿರಲಿಲ್ಲ ಎಂದು ಅವರನ್ನು ನೋಡಿದಾಗ ತಿಳಿಯುತ್ತದೆ. ಬಹಳ ಅಭಿಮಾನದಿಂದ ಈ ಸನ್ಮಾನವನ್ನು ಮಾಡಲಾಗಿದೆ ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ "ಜ್ಞಾನಶಕ್ತಿ ವಿಷನ್ 2025" ಸ್ಮರಣ ಸಂಚಿಕೆಯನ್ನು ಶ್ರೀಗಳು ಬಿಡುಗಡೆ ಮಾಡಿದರು.

**ಪಲ್ಲಕ್ಕಿ ಸೇವೆ:**

ದೇವಸ್ಥಾನದಲ್ಲಿ ಈಗಾಗಲೇ ಹಲವು ಸೇವೆಗಳನ್ನು ಆರಂಭಿಸಲಾಗಿದೆ. ತುಲಾಭಾರ, ಆಶ್ಲೇಷಾಬಲಿ ಇತ್ಯಾದಿ ಸೇವೆಗಳನ್ನು ಈಗ ಮಾಡಲಾಗುತ್ತಿದೆ. ಇದಕ್ಕೆ ಹೊಸ ಸೇರ್ಪಡೆಯಾಗಿ ಪಲ್ಲಕ್ಕಿ ಸೇವೆಯನ್ನು ಆರಂಭಿಸಲಾಗಿದೆ. ಈ ಸೇವೆಗಾಗಿ ಭಕ್ತರು ಪಲ್ಲಕ್ಕಿಯನ್ನು ಭಕ್ತಿಪೂರ್ವಕವಾಗಿ ಸ್ವಾಮಿಗೆ ಅರ್ಪಿಸಿ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ.

**ಸಾಂಸ್ಕೃತಿಕ ಕಾರ್ಯಕ್ರಮಗಳು:**

ಧಾರ್ಮಿಕ ಕಾರ್ಯಕ್ರಮದ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ರಾಜ್ಯದ ಪ್ರಸಿದ್ಧ ಕಲಾವಿದರು ದೇವರ ಮುಂದೆ ಕಲಾ ಸೇವೆಯನ್ನು ನೀಡಿದರು. ಜೂನ್ 15 ರಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಧಾರ್ಮಿಕ ಉಪನ್ಯಾಸ ನೀಡಿದರು.


ಪ್ರತಿ ದಿವಸ ಬೆಳಗ್ಗೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಭಜನಾ ಮಂಡಳಿಯ ಸದಸ್ಯರ ಭಜನಾ ಕಾರ್ಯಕ್ರಮದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಳ್ಳುತ್ತಿದ್ದವು. ಕರ್ನಾಟಕ ಕಲಾಶ್ರೀ ಎನ್.ಕೆ. ಮೋಹನ್ ಕುಮಾರ್ ನಿಟ್ಟೂರುರವರಿಂದ ಹರಿಕಥೆ, ಚೈತನ್ಯ ಸತೀಶ್‌ರವರಿಂದ ಸಂಗೀತ ಕಚೇರಿ, ವಿದುಷಿ ಪ್ರೀತಿಕಾ ಅಭಿಷೇಕ್‌ರವರಿಂದ ನೃತ್ಯ ಕಾರ್ಯಕ್ರಮ, ಹೃಷಿತಾ ಕೇದಿಗೆಯವರಿಂದ ಸಂಗೀತ ಕಚೇರಿ, ಚಿಂತಕ ಚಕ್ರವರ್ತಿ ಸೂಲಿಬೆಲೆಯವರಿಂದ ಧಾರ್ಮಿಕ ಪ್ರವಚನ, ಹರ್ಷಿಣಿ ಸುಭಾಶ್ ರಾವ್ ತಂಡದಿಂದ ನೃತ್ಯ, ಕುಸುಮ ಮತ್ತು ಅಚಲ್ ರಾವ್‌ರವರಿಂದ ಸಂಗೀತ ಕಚೇರಿ, ಶರಣ್ಯ ರಾವ್ ಶರವೂರು ಇವರಿಂದ ಭರತನಾಟ್ಯ, ಶ್ರೀ ಶಾರದಾ ಯಕ್ಷಗಾನ ಕಲಾವಿದರು ಉಡುಪಿ ಇವರಿಂದ "ಸಮಗ್ರ ಕಂಸ ಯಕ್ಷಗಾನ", ಚಿನ್ಮಯ ಮಿಷನ್ ಬ್ರಹ್ಮಾನಂದ ಸರಸ್ವತಿ ಅವರಿಂದ ಪ್ರವಚನ, ರಾಧಾಕೃಷ್ಣ ಕಲ್ಚಾರ್, ಸುಬ್ರಾಯ ಸಂಪಾಜೆ ಇವರಿಂದ ಕಾವ್ಯವಾಚನ, ಸಾಂಗತ್ಯ ಕಲಾಚಾವಡಿ ತಂಡದವರಿಂದ "ಯಕ್ಷಗಾನಾರ್ಚನೆ", ವಿದುಷಿ ಸಂಧ್ಯಾ ಕೇಶವ್ ರಾವ್ ಮತ್ತು ತಂಡದವರಿಂದ "ಶಂಕರ ವಿಜಯ" ನೃತ್ಯ ರೂಪಕ, ವಿದುಷಿ ಮಾನಸಿ ಪ್ರಸಾದ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಪ್ರಸಿದ್ಧ ತೆಂಕುತಿಟ್ಟು ಕಲಾವಿದರಿಂದ "ಸುಭದ್ರಾ ಕಲ್ಯಾಣ–ಹಿರಣ್ಯಾಕ್ಷ ವಧೆ" ಯಕ್ಷಗಾನಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಕೊನೆಗೊಂಡವು. ಈ ಐದು ದಿನಗಳ ಕಾರ್ಯಕ್ರಮಗಳಲ್ಲಿ 10 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿ ದೇವರ ಪ್ರಸಾದವನ್ನು ಸ್ವೀಕರಿಸಿದರು.

ಯಾವುದೇ ಮಹಾನ್ ಕಾರ್ಯ ಯಶಸ್ವಿ ಆಗಬೇಕಾದರೆ ಹಲವು ವ್ಯಕ್ತಿಗಳ ತ್ಯಾಗ ಇರುತ್ತದೆ. ಅದೇ ರೀತಿಯಾಗಿ ಈ 5 ದಿನ ವಿಜೃಂಭಣೆಯಿಂದ ನಡೆದ ಈ ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮದ ಯಶಸ್ಸಿನ ಹಿಂದೆ 150 ಕ್ಕೂ ಹೆಚ್ಚು ಸಂಖ್ಯೆಯಲ್ಲಿ ನಮ್ಮ ಸಮಾಜದ ಸ್ವಯಂ ಸೇವಕರು ಕೆಲಸ ಮಾಡಿದ್ದಾರೆ. ವಿವಿಧ ಸಮಿತಿಗಳ ಪರಸ್ಪರ ಸಹಕಾರದಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಬೆಂಗಳೂರು ಅಲ್ಲದೇ ಬೇರೆ ಭಾಗಗಳಿಂದಲೂ ಬಂಧುಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಿದ್ದಾರೆ. ಇದೇ ರೀತಿಯಾಗಿ ಮುಂದೆಯೂ ಕಾರ್ಯಕ್ರಮಗಳಿಗೆ ಸಮಾಜದ ಬಂಧುಗಳು ಸಹಕಾರ ನೀಡಬೇಕು ಎನ್ನುವುದು ಎಬಿಎಸ್‌ಬಿಎಸ್ ಆಶಯ.

## ಮಾಜಿ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆರಿಂದ ನಂದಳಿಕೆ ಪದ್ಮನಾಭ ರಾವ್‌ರವರ ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು ಕೃತಿ ಲೋಕಾರ್ಪಣೆ

ಪದ್ಮಾಲಯ ಪ್ರಕಾಶನ ದಿ. 22.06.2022 ರಂದು ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ವಿಶ್ರಾಂತ ಜಿಲ್ಲಾ ಗ್ರಂಥಪಾಲಕ ನಂದಳಿಕೆ ಪದ್ಮನಾಭ ರಾವ್ ವಿರಚಿತ "ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು" ಕೃತಿಯನ್ನು ಲೋಕಾರ್ಪಣೆಗೊಳಿಸಿ ಸಂತೋಷ ಹೆಗ್ಡೆ ಮಾತನಾಡಿದರು.

ನಾವು ಓದುವಾಗ ಪ್ರಾಥಮಿಕ ಶಾಲೆಯಲ್ಲಿ ನೀತಿ ಪಾಠ ಭೋಧಿಸಲಾಗುತ್ತಿತ್ತು. ಇಂದಿನ ಪಠ್ಯ ಪುಸ್ತಕಗಳಲ್ಲಿ ಯಾವ ನೀತಿ ಪಾಠವೂ ಇಲ್ಲ. ಭಾಷೆ ಮತ್ತು ಧರ್ಮದ ಹೆಸರಿನಲ್ಲಿ ಪ್ರತಿದಿನ ಜನರನ್ನು ಶೋಷಿಸಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ ವಿಶ್ರಾಂತ ನ್ಯಾಯಮೂರ್ತಿ ಹಾಗೂ ಕರ್ನಾಟಕದ ಮಾಜಿ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ 'ನಂದಳಿಕೆ



ಪದ್ಮನಾಭ ರಾವ್ ಅವರು ಬರೆದಿರುವ "**ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು**" ಎಂಬ ಈ ಪುಸ್ತಕವನ್ನು ಓದಿ ಅವುಗಳಲ್ಲಿ ಕನಿಷ್ಠ 2 ಮೌಲ್ಯಗಳನ್ನಾದರೂ ಪಾಲಿಸೋಣ' ಎಂದು ಮನವಿ ಮಾಡಿದರು.

ಮುಖ್ಯ ಅತಿಥಿಯಾಗಿದ್ದ ಶಾಸಕ ಎ.ಟಿ. ರಾಮಸ್ವಾಮಿ ಮಾತಾಡಿ "ರಾಜಕಾರಣವೂ ಸೇರಿದಂತೆ ಎಲ್ಲಾ ರಂಗಗಳು ಕಲುಷಿತಗೊಂಡಿರುವ ಇಂದಿನ ಸಂದರ್ಭದಲ್ಲಿ ಪದ್ಮನಾಭರಾವ್ ರಚಿಸಿರುವ ಪುಸ್ತಕ ಪರಿಸ್ಥಿತಿಗಳನ್ನು ಸುಧಾರಿಸಲು ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು."

ಮತ್ತೊಬ್ಬ ಮುಖ್ಯ ಅತಿಥಿ, ಹಿರಿಯ ಲೇಖಕಿ, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಮಾತನಾಡಿ ಪದ್ಮನಾಭ ರಾವ್ ಅವರು ಒಂದು ಉತ್ತಮ ಪುಸ್ತಕದ ಮೂಲಕ ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನ ನಡೆಸಿದ್ದಾರೆ ಎಂದು ನುಡಿದು ಅವರನ್ನು ಅಭಿನಂದಿಸಿದರು.

ಅಧ್ಯಕ್ಷತೆ ವಹಿಸಿದ್ದ ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರವರು "ಕೆಲವು ಪುಸ್ತಕಗಳನ್ನು ಮುಟ್ಟಿದ ನಂತರ ಕೈ ತೊಳೆದುಕೊಳ್ಳಬೇಕಾಗುತ್ತದೆ. ಇನ್ನು ಕೆಲವು ಪುಸ್ತಕಗಳನ್ನು ಕೈತೊಳೆದುಕೊಂಡು ಮುಟ್ಟಬೇಕಾಗುತ್ತದೆ. ಇಂತಹ ಎರಡನೇ ಸಾಲಿಗೆ ಸೇರುವ ಪುಸ್ತಕ "**ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು**" ಮೌಲ್ಯಕ್ಕಾಗಿ ಬದುಕುವ ಈ ಕೃತಿಯ ಲೇಖಕ ನಂದಳಿಕೆ ಪದ್ಮನಾಭರಾವ್ ಮತ್ತು ಪುಸ್ತಕವನ್ನು ಪ್ರಕಟಿಸಿರುವ ಎಸ್.ಎಸ್. ಪಡಶೆಟ್ಟಿ ಇವರಿಬ್ಬರು ಅಭಿನಂದನಾರ್ಹರು" ಎಂದರು. ಸಭಾಂಗಣದಲ್ಲಿ ಭಾರತ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡ ದಿಗ್ಗಜರ ಛಾಯಾಚಿತ್ರಗಳ ಪ್ರದರ್ಶನವನ್ನು ಪದ್ಮನಾಭ ರಾವ್ ಏರ್ಪಡಿಸಿದ್ದರು.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಶ್ರೀ ಕ್ಷೇತ್ರ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನ ಶಂಕರಭಗವತ್ಪಾದಾಚಾರ್ಯರ ಮೂರ್ತಿ ಪ್ರತಿಷ್ಠಾಪಿಸಲು ನಿರ್ಧಾರ

ತಾ.17.04.2022ರಂದು ಶ್ರೀಮಜ್ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳ ಪವಿತ್ರಹಸ್ತಗಳಿಂದ ಶ್ರೀ ಬಾಲಗಣಪತಿ ದೇವರ ಬ್ರಹ್ಮಕುಂಭಾಭಿಷೇಕ ಹಾಗೂ ಪುಷ್ಪರಥ ಸಮರ್ಪಣಾ ಮಹೋತ್ಸವಗಳು ವಿಜೃಂಭಣೆಯಿಂದ ಸಂಪನ್ನಗೊಂಡಿರುವುದು ತಮಗೆಲ್ಲ ವೇದ್ಯವಾದ ವಿಚಾರ. ಶ್ರೀ ಜಗದ್ಗುರುಗಳು ಅನುಗ್ರಹ ಸಂದೇಶವನ್ನು ಕರುಣಿಸುವ ಸಮಯದಲ್ಲಿ ಈ ಕ್ಷೇತ್ರದಲ್ಲಿ ಶ್ರೀ ಶಂಕರಭಗವತ್ಪಾದರ ಪ್ರತಿಮೆಯನ್ನು ಸ್ಥಾಪಿಸಿ ಯಥಾಯೋಗ್ಯವಾಗಿ ಆರಾಧನೆ ನಡೆಸುತ್ತಾ ಶ್ರೀ ಶಂಕರಜಯಂತಿ, ಸಾಪ್ತಾಹಿಕ ಭಜನೆ ಮುಂತಾದ ಆಚರಣೆಗಳನ್ನು ನಡೆಸುವಂತೆ ಆದೇಶಿಸಿರುತ್ತಾರೆ. ಆ ಪ್ರಕಾರ ಬ್ರಹ್ಮಕಲಶೋತ್ಸವ ಸಮಿತಿಯ ಹಾಗೂ ಆಡಳಿತ ಸಮಿತಿಯ ಸದಸ್ಯರು ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ 22.04.2022ನೇ ಶುಕ್ರವಾರದಂದು ಶೃಂಗೇರಿಗೆ ತೆರಳಿ ಶ್ರೀಜಗದ್ಗುರುಗಳನ್ನು ಸಂದರ್ಶಿಸಿ ಈ ವಿಚಾರದಲ್ಲಿ ಶ್ರೀಶ್ರೀಗಳವರ ಮಾರ್ಗದರ್ಶನವನ್ನು ಬೇಡಿದರು. ಆಗ ಶ್ರೀ ಜಗದ್ಗುರುಗಳು ಆದೇಶಿಸಿದಂತೆ ಶ್ರೀಶಂಕರಭಗತ್ಪಾದಕರ ಅಮೃತಶಿಲಾ ಮೂರ್ತಿಯನ್ನು ಶ್ರೀ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವುದೆಂದು ತೀರ್ಮಾನಿಸಲಾಯಿತು. ಶ್ರೀ ಮಠದಿಂದಲೇ ಆಚಾರ್ಯ ಶ್ರೀಶಂಕರರ ಮೂರ್ತಿಯನ್ನು ಒದಗಿಸಲಾಗುವುದೆಂದು ಶ್ರೀಗುರುಗಳಿಂದ ಅಪ್ಪಣೆಯಾಯಿತು. ವಿಗ್ರಹವೆಚ್ಚ ಹಾಗೂ ಅದರ ಸ್ಥಾಪನೆಯ ಖರ್ಚುಗಳಿಗೆ ಸುಮಾರು ಎರಡೂವರೆ ಲಕ್ಷ ರೂಪಾಯಿಗಳ ಅವಶ್ಯಕತೆಯನ್ನು ಅಂದಾಜಿಸಲಾಗಿದೆ. ಶ್ರೀ ಕ್ಷೇತ್ರದ ತಂತ್ರಿಗಳು ಸೂಚಿಸಿದಂತೆ ಆದಷ್ಟು ಹೆಚ್ಚು ಭಕ್ತರು ಶ್ರೀಗುರುಸೇವೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಲು ನಿರ್ಧರಿಸಲಾಯಿತು. ಆದ್ದರಿಂದ ಶ್ರೀಗುರುಭಕ್ತರು ತಲಾ 1000 ರೂಪಾಯಿ ಕೂಪನ್ ಪಡೆದುಕೊಂಡು ಶ್ರೀಗುರುಗಳ ಆಜ್ಞೆಯು ಸಾಕಾರಗೊಳ್ಳುವಲ್ಲಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗೆ ಜಗಭಿರಾಮ ರಾಮ ಸ್ವಾಮಿ (ಮೊ:9448626220), ಶ್ರೀನಿವಾಸ ಶರ್ಮ (ಮೊ: 9945933363), ಪಿ.ಡಿ. ಶೇಖರ್ ರಾವ್ (ಮೊ: 9686942489) ಇವರನ್ನು ಸಂಪರ್ಕಿಸಬಹುದು. ಹಣ ಕಳುಹಿಸಲಿಚ್ಛಿಸುವ ಭಕ್ತಾದಿಗಳು ಕರ್ನಾಟಕ ಬ್ಯಾಂಕ್, ಪಡುಬಿದ್ರಿ ಶಾಖೆ S.B A/c No: 6102500100134701, IFSC Code: KARB0000610 ಈ ಖಾತೆಗೆ ಕಳುಹಿಸಬಹುದು.

## ಶ್ರೀ ಶಾರದಾ ದೇವಸ್ಥಾನದಲ್ಲಿ ರುದ್ರಾಭಿಷೇಕ

ಶ್ರೀಯುತ ಬೆಳ್ಮಣ್ ವಾಸುದೇವರಾಯರು ಪ್ರತಿ ವರ್ಷದಂತೆ ಈ ಬಾರಿಯೂ ಜೂನ್ 21ರ ಜನ್ಮ ದಿನದಂದು (91ನೇ ವರ್ಷದ ಜನ್ಮದಿನ) ಉಡುಪಿಯ ಶ್ರೀ ಶಾರದಾ ದೇವಸ್ಥಾನದಲ್ಲಿ ಏಕಾದಶರುದ್ರ ಪಾರಾಯಣದೊಂದಿಗೆ ರುದ್ರಾಭಿಷೇಕವನ್ನು ನೆರವೇರಿಸಿದರು.

## ಶ್ರೀ ಶಂಕರ ಪ್ರತಿಷ್ಠಾನ(ರಿ), ಪ್ರಸಾದ ಭವನ, ಕಾರ್ಕಳ 574 104

ಪ್ರತಿ ವರ್ಷದಂತೆ ಈ ವರ್ಷವೂ ಕಾರ್ಕಳ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರತಿಭಾವಂತ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಪಾಸ್ ಆದ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನವನ್ನು ನಮ್ಮ ಸಂಘದ ವಾರ್ಷಿಕೋತ್ಸವ ದಿನದಂದು ಕೊಡಮಾಡಲಾಗುವುದು, ಅರ್ಹ ವಿದ್ಯಾರ್ಥಿಗಳಿಗೆ ಈ ವಿಷಯವನ್ನು ಕಾರ್ಕಳ ತಾಲೂಕಿನ ನಮ್ಮ ಸಮಾಜದ ಎಲ್ಲಾ ಮನೆಗಳಿಗೂ ತಲುಪಿಸಿ.

ವಿದ್ಯಾರ್ಥಿಗಳು ಕೆಳಕಂಡ ವಿಳಾಸಕ್ಕೆ ತಮ್ಮ ಅರ್ಜಿಯೊಂದಿಗೆ, ಮೊಬೈಲ್ ನಂಬರ್, ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಿ, ಅಂಕಪಟ್ಟಿಯನ್ನು ದಿನಾಂಕ 10.07.2022ರ ಒಳಗೆ ಕಳುಹಿಸಬೇಕು. ಸ್ಥಾನಿಕ ಬ್ರಾಹ್ಮಣ ಸಮಾಜದ ಕಾರ್ಕಳ ತಾಲೂಕಿನ ವಿದ್ಯಾರ್ಥಿಗಳ ಅರ್ಜಿಯನ್ನು ಮಾತ್ರ ಸ್ವೀಕರಿಸಲಾಗುವುದು.

**ಮಾಹಿತಿಗಾಗಿ ಶ್ರೀ ಕೇಶವ ರಾವ್, ಅಧ್ಯಕ್ಷರು (ಮೊ. 9902332609), ಶ್ರೀ ಹರಿಶ್ಚಂದ್ರ ರಾವ್, ಕಾರ್ಯದರ್ಶಿ (ಮೊ.9482623212), ಶ್ರೀ ಭವಾನಿಶಂಕರ ರಾವ್ ಸಂಚಾಲಕರು, ವಿದ್ಯಾನಿಧಿ (ಮೊ 9980543123) ಹಾಗೂ ಶ್ರೀ ವಿಜಯ ಕುಮಾರ್ ಪರಪು, ಸಂಚಾಲಕರು, ವಿದ್ಯಾನಿಧಿ (ಮೊ. 9449760434) ಇವರನ್ನು ಸಂಪರ್ಕಿಸಬಹುದು.**

**ಅಂಕಪ್ರತಿ ಹಾಗೂ ಅರ್ಜಿಯನ್ನು ಶ್ರೀಮತಿ ಮಲ್ಲಿಕಾ ಎಸ್ ಹೆಬ್ಬಾರ್ ಕಾರ್ಯದರ್ಶಿ, ಮಹಿಳಾ ವಿಭಾಗ "ಸಾವಿತ್ರಿ ನಿವಾಸ", 19 ನೇ ತಿರುವು, ತೆಳ್ಳಾರು ರಸ್ತೆ, ಕಾರ್ಕಳ–574 104. ಮೊ. 73533 71403 ಇವರಿಗೆ ಕಳುಹಿಸಲು ಕೋರಲಾಗಿದೆ.**

## ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಸಂಸ್ಥೆಯ 2021–22ರ ರಾಷ್ಟ್ರೀಯ ಅಧ್ಯಕ್ಷ ಯಶಸ್ವಿ ಸಂಘಟಕ, ಡಾ. ಕೇದಿಗೆ ಅರವಿಂದ ರಾವ್



ಸಂಘಟನಾ ಚತುರತೆ, ಸಮರ್ಥ ನಾಯಕತ್ವ, ಮಾನವೀಯ ಕಳಕಳಿ ಅಭಿವೃದ್ಧಿಗೆ ತುಡಿಯುವ ಮನಸ್ಸುಳ್ಳ ವೈದ್ಯಕೀಯ ಕ್ಷೇತ್ರದ ಶ್ರೇಷ್ಠ ಸಾಧಕರಾದ ಡಾ. ಕೇದಿಗೆ ಅರವಿಂದ ರಾವ್ ಹೆಸರು ಎಲ್ಲರಿಗೂ ಚಿರಪರಿಚಿತರು. ಜೀವ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀದರರು. ಜೈವಿಕ ತಂತ್ರಜ್ಞಾನದಲ್ಲಿ ಡಾಕ್ಟರೇಟ್ ಪದವೀದರರು. ಮಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ನಿವೃತ್ತ ಪ್ರಾಚಾರ್ಯರು. ಹಾಗೂ ವೈದಕೀಯ ಕ್ಷೇತ್ರದಲ್ಲಿ ರಸಾಯನ ಶಾಸ್ತ್ರ ವಿಭಾಗದ ಹಿರಿಯ ಸಲಹೆಗಾರರು. ಜೈವಿಕ ತಂತ್ರಜ್ಞಾನದ ಕ್ಷೇತ್ರದಲ್ಲಿ ವಿಶೇಷ ಸಲಹೆಗಾರರಾಗಿದ್ದಾರೆ. ಇವರ ತಂದೆ ದಿ. ಕೇದಿಗೆ ಭಾಸ್ಕರ ರಾವ್, ತಾಯಿ ದಿ. ಲಕ್ಷ್ಮೀ ಭಾಸ್ಕರ ರಾವ್, ಪತ್ನಿ ಗಾಯತ್ರಿ ಅರವಿಂದ್ ರಾವ್, ಮಕ್ಕಳು ಡಾ. ಅಂಜಲಿ ಅಮಿತ್ ಕುಮಾರ್, ಅನನ್ಯ ರಾವ್ ಕೇದಿಗೆ ಮತ್ತು ಮೊಮ್ಮಕ್ಕಳ ಜೊತೆ ಸುಖೀ ಜೀವನ ನಡೆಸುತ್ತಿದ್ದಾರೆ.

ನವೆಂಬರ್ 10ರಂದು ಜನಿಸಿರುವ ಡಾ. ಕೇದಿಗೆ ಅರವಿಂದ್ ರಾವ್ ಮೂಲತಃ ಬಂಟ್ವಾಳ ತಾಲೂಕಿನ ಕೇದಿಗೆಯವರು. ಪ್ರಾಥಮಿಕ, ಪ್ರೌಢ, ಹೈಸ್ಕೂಲ್, ಪದವಿ ಶಿಕ್ಷಣವನ್ನು ಎಸ್.ವಿ.ಎಸ್. ಕಾಲೇಜ್ ಬಂಟ್ವಾಳದಲ್ಲಿ ಮುಗಿಸಿ, ಎಮ್.ಎಸ್ಸಿ., ಪಿ.ಎಚ್.ಡಿ ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಮುಗಿಸಿದರು. ನಾಲ್ಕು ವರುಷ ಪ್ರೊಫೆಸರ್ ಆಗಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ, ಅಪಾರ ವಿದ್ಯಾರ್ಥಿಗಳ ಪ್ರೀತಿಪಾತ್ರರಾಗಿದ್ದಾರೆ. ಚಾರಣದ ಬಗ್ಗೆ ವಿಶೇಷ ಆಸಕ್ತಿಯುಳ್ಳ ಶ್ರೀಯುತರು ಅನೇಕ ಬಾರಿ ದೂರ ದೂರ ಚಾರಣ ಹೋಗಿ ಬಂದಿರುತ್ತಾರೆ. ಫೋಟೋಗ್ರಫಿ ವಿದೇಶ ಪ್ರಯಾಣದ ಬಗ್ಗೆ ಅತೀವ ಆಸಕ್ತಿ ಹೊಂದಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ ಎನ್.ಸಿ.ಸಿ. ಯಲ್ಲಿ ಸಕ್ರಿಯರು.

ಲಯನ್ಸ್ ಸೇವಾ ಸಂಸ್ಥೆಯಲ್ಲಿ ಹಲವು ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸಿ ಸರಿಸುಮಾರು 35 ವರುಷ ಅಮೋಘ ಸೇವೆ ಸಲ್ಲಿಸಿದ್ದಾರೆ. ಜೆ.ಸಿ. ಯಲ್ಲಿ ಸರಿಸುಮಾರು 45 ವರುಷ ಸೇವೆ ಸಲ್ಲಿಸಿ ಯಶಸ್ವಿ ಸಂಘಟಕರಾಗಿ ಎಲ್ಲರ ಪ್ರೀತಿ ಪಾತ್ರರಾಗಿದ್ದಾರೆ. ಮಂಗಳೂರಿನ ನೋವಾ ಮೆಡಿಕಲ್ ಡಯಾಗ್ನೋಸ್ಟಿಕ್ ಮತ್ತು ಸಂಶೋಧನಾ ಸಂಸ್ಥೆಯ ಆಡಳಿತೆ ನಿರ್ದೇಶಕರಾಗಿದ್ದು, ಮಂಗಳೂರಿನ "ಕಮಲ್‌ಜೀತ್" ಲ್ಯಾಬೊರೇಟರೀಸ್ ಸಮೂಹ ಸಂಸ್ಥೆಯ ಮುಖ್ಯಸ್ಥರು. ಲೈಟ್‌ಹೌಸ್ ಮೆಡಿಕಲ್ ಸಂಸ್ಥೆಯ ಪಾಲುದಾರರು. ದಕ್ಷಿಣ ಕನ್ನಡ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಜೀವ ಸದಸ್ಯರು. ಕೆನರಾ ಛೇಂಬರ್ ಆಫ್ ಕಾಮರ್ಸ್ ಸಂಸ್ಥೆಯ ಸದಸ್ಯರು. ಕೇದಿಗೆ ಪ್ರತಿಷ್ಠಾನ ಮತ್ತು ಮಂಗಳೂರು ಲಯನ್ಸ್ ಟ್ರಸ್ಟ್ ಅಧ್ಯಕ್ಷರು. ಜೆಸಿಐ ಭಾರತ ವಲಯ ಹದಿನೈದು ಪೂರ್ವ ವಲಯಾಧ್ಯಕ್ಷರು. 1993ರಿಂದ ಸಕ್ರಿಯ ಲಯನ್ಸ್ ಸದಸ್ಯರು. ಲಯನ್ಸ್ ಕ್ಲಬ್ ಮಂಗಳೂರು ಪೂರ್ವಾಧ್ಯಕ್ಷರು, ಲಯನ್ಸ್ ಜಿಲ್ಲೆ 317ಡಿ. ಪೂರ್ವ ಸಂಪುಟ ಕಾರ್ಯದರ್ಶಿ ಲಯನ್ಸ್ ಜಿಲ್ಲೆ ಮತ್ತು ಮಲ್ಟಿಪಲ್‌ಗಳಲ್ಲಿ ಅತ್ಯುತ್ತಮ ಕ್ಲಬ್ ಅಧ್ಯಕ್ಷ ಹಾಗೂ ಕ್ಲಬ್ ಪ್ರಶಸ್ತಿ ಪ್ರಾಪ್ತವಾಗಿದೆ. ಇಂಡಿಯನ್ ಸೀನಿಯರ್ ಛೇಂಬರ್ ಮಂಗಳೂರು ರೀಜನ್ ಸ್ಥಾಪಕಾಧ್ಯಕ್ಷರು. 2021–22 ಕೊರೋನಾ ಸಂಕಷ್ಟ ಕಾಲದಲ್ಲಿ ಮಾಡಿದ ಅನೇಕ ಸಾಧನೆಗಳು ಸೀನಿಯರ್ ಛೇಂಬರ್ ಸಂಸ್ಥೆಯ ಇತಿಹಾಸದಲ್ಲೇ ಚಾರಿತ್ರಿಕವಾಗಿದೆ. ಆಡಳಿತ ವಿಭಾಗದಲ್ಲಿ ಸ್ಪರ್ಧಾತ್ಮಕ ನಿಯಮಗಳ ಜಾರಿ, ಶುದ್ಧ ಕುಡಿಯುವ ನೀರಿನ ಜಲಧಾರಾ ಕಾರ್ಯಕ್ರಮಗಳ ಅನುಷ್ಠಾನ, 50ಕ್ಕೂ ಹೆಚ್ಚು ಜಲಧಾರಾ ಘಟಕಗಳ ಸ್ಥಾಪನೆ. ಸೀನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಹೆಸರಿನಲ್ಲಿ ಸಂಸ್ಥೆಯ ನೋಂದಣಿ ಕಾರ್ಯ, ಹಿಂದುಳಿದ ವಿದ್ಯಾರ್ಥಿಗಳಿಗೆ ಧನಸಹಾಯ, ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಐದು ದಿನಗಳ ದುಬೈ ಪ್ರವಾಸ, ಪರಿಕ್ರಮ–22, ಅಂತರಾಷ್ಟ್ರೀಯ ಅಧಿವೇಶದ ಅಧ್ಯಕ್ಷತೆಯ ಹೆಗ್ಗಳಿಕೆ. ಸದಾ ಕ್ರಿಯಾಶೀಲರಾಗಿರುವ ಡಾ. ಕೇದಿಗೆ ಅರವಿಂದ ರಾವ್ ಓರ್ವ ನಿಸ್ವಾರ್ಥಿ ಸರಳ ಸಜ್ಜನರು. ತಾನು ಆಯಿತು, ತನ್ನ ಕೆಲಸವಾಯಿತು ಎಂಬಂತೆ ಇರುವ ಇವರು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದಾರೆ. ಇವರ ಸಾಧನೆಗೆ ಇವರ ಕುಟುಂಬ ವರ್ಗ ಸಂಪೂರ್ಣ ಸಹಕಾರ ನೀಡಿದೆ. ಇವರಿಗೆ ಶ್ರೀಶಾರದಾ ಅಭಿನಂದಿಸುತ್ತದೆ.



ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ.
ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೊಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933


Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಬೆಂಗಳೂರು ಪ್ರವಾಸ

(...1ನೇ ಪುಟದಿಂದ)

ನಂತರ ಮಧ್ಯಾಹ್ನದ ಊಟಕ್ಕೆ ಸಿದ್ಧಮಾಡಿಕೊಂಡೆವು. ಎಲ್ಲರೂ ಮಧ್ಯಾಹ್ನದ ಊಟಕ್ಕೆ ತಮ್ಮ ತಮ್ಮ ಮನೆಯಿಂದ ಸಿದ್ಧಪಡಿಸಿಕೊಂಡು ತಂದಿದ್ದೆವು. ಅದನ್ನು ಹಂಚಿಕೊಂಡು ತಿನ್ನುತ್ತಾ ಹೋದೆವು. ನಂತರ ಸುಬ್ರಹ್ಮಣ್ಯ ಸ್ಟೇಷನ್ ಬಂದ ಸಂದರ್ಭ. ಅಲ್ಲಿಂದ ಮುಂದೆ ಪ್ರಕೃತಿಯ ಸೌಂದರ್ಯ ನೋಡಲು ಕಾತುರದಿಂದ ಕಾಯುತ್ತಾ ಇದ್ದೆವು. ಅಂತು ಪ್ರಕೃತಿಯ ಸೌಂದರ್ಯ ಕಾಣ ಸಿಕ್ಕಿತು. ಅದೆಲ್ಲವನ್ನು ನಮ್ಮ ಫೋನ್ ಅಲ್ಲಿ ಸೆರೆಹಿಡಿದೆವು. ಟ್ರೈನ್ ನಲ್ಲಿ ಹೊತ್ತು ಕಳೆದದ್ದು ಗೊತ್ತಾಗಲಿಲ್ಲ. ಸಂಜೆ ಯಾಗುತ್ತಿದ್ದಂತೆ ಸ್ವಲ್ಪ ಬೇಸರವಾಗಲು ಶುರುವಾದಾಗ ಒಬ್ಬರಿಗೊಬ್ಬರು ಕಾಲು ಎಳೆದುಕೊಂಡು ಮಜಾ ಮಾಡುತ್ತಾ ಹೋದೆವು. ಕೊನೆಗೂ ರಾತ್ರಿ 9:00 ಗಂಟೆಗೆ ಬೆಂಗಳೂರು ತಲುಪಿದೆವು. ಅಲ್ಲಿಂದ ನಮಗೆ ಜ್ಞಾನಶಕ್ತಿ ದೇವಸ್ಥಾನಕ್ಕೆ ಹೋಗಲು ಅಲ್ಲಿನ ಬಸ್ಸು ಬಂದಿತ್ತು. ಎಲ್ಲರೂ ಅದರಲ್ಲಿ ಹೊರಟು ದೇವಸ್ಥಾನವನ್ನು 10.00 ಗಂಟೆಗೆ ತಲುಪಿದೆವು. ಸಂಜೆಯ ನಂತರ ಏನೂ ತಿನ್ನದ ರಾತ್ರಿಯ ಹೊತ್ತು ಎಲ್ಲರಿಗೂ ಬಹಳ ಹಸಿವಾಗಿತ್ತು. ಹಾಲ್ ತಲುಪಿದ ನಾವು ಊಟ ಮಾಡಿ ಮಲಗಲು ಸಿದ್ಧರಾದೆವು. ಬೆಳಿಗ್ಗೆ ಎಲ್ಲರೂ ಬೇಗ ಎದ್ದು ಸ್ನಾನ ಮುಗಿಸಿ ಪುನಃ ಉಪಹಾರಕ್ಕೆ ಹಾಲ್‌ಗೆ ತೆರಳಿದೆವು. ದೇವರ ದರ್ಶನವನ್ನು ಮುಗಿಸಿ ಹಾಲ್‌ಗೆ ಬಂದೆವು. ಅಷ್ಟು ಹೊತ್ತಿಗೆ ನಮ್ಮ ತಂಡದ ಉಳಿದ ಸದಸ್ಯರು ಬಂದು ನಮ್ಮ ಜೊತೆ ಸೇರಿಕೊಂಡರು. ಸುಮಾರು 11.00 ಗಂಟೆಯ ಹೊತ್ತಿಗೆ ಭಾಗವತರಾದ ಚಂದ್ರಕಾಂತ್ ರಾವ್ ಮೂಡುಬೆಳ್ಳೆಯವರು ಬಂದ ನಂತರ ಅವರ ಜೊತೆ ಸೇರಿ ಸಂಜೆಯ ಪ್ರದರ್ಶನಕ್ಕೆ ಬೇಕಾದ ಅಭ್ಯಾಸವನ್ನು ಮಾಡಿದೆವು. ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಮಧ್ಯಾಹ್ನದ ಊಟವನ್ನು ಮುಗಿಸಿದ ನಂತರ ಸುಮಾರು 2.30 ಗಂಟೆಗೆ ಯಕ್ಷಗಾನಕ್ಕೆ ಹೊರಡಲು ಸಿದ್ಧರಾದೆವು. ಸಂಜೆ 6.30 ಗಂಟೆಗೆ ಸರಿಯಾಗಿ "ಸಮಗ್ರ ಕಂಸ" ಎಂಬ ಯಕ್ಷಗಾನ ಪ್ರದರ್ಶನವನ್ನು ಆಡಿತೋರಿಸಿದೆವು. ನಮ್ಮ ಪ್ರದರ್ಶನವನ್ನು ವೀಕ್ಷಿಸಿದ ಎಲ್ಲರೂ ಬಹಳ ಸಂತೋಷ ಗೊಂಡರು. ಪ್ರತಿಯೊಬ್ಬರ ಪ್ರೋತ್ಸಾಹ ಮತ್ತು ಸಹಕಾರ ನಮಗೆ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಯಿತು. ಇನ್ನು ಮುಂದೆಯೂ ನಿಮ್ಮಿಂದ ನಮಗೆ ಇದೇ ರೀತಿಯ ಪ್ರೋತ್ಸಾಹ ಮತ್ತು ಸಹಕಾರ ಸಿಗುವಂತಾಗಲಿ ಎಂದು ಆಶಿಸುತ್ತಾ ನಮ್ಮ ಕಾರ್ಯಕ್ರಮವನ್ನು ಮುಗಿಸಿದೆವು. ನಮಗೆ ಅವಕಾಶ ಕೊಟ್ಟಂತಹ ಅಲ್ಲಿನ ಸದಸ್ಯರು ನಮ್ಮ ತಂಡದ ಎಲ್ಲರಿಗೂ ಸ್ಮರಣಿಕೆಯನ್ನು ನೀಡಿ ನಮ್ಮನ್ನು ಗೌರವಿಸಿದರು. ಹಾಗೆಯೇ ಖುಷಿಯನ್ನು ಹಂಚಿಕೊಂಡರು.

ಪ್ರದರ್ಶನ ಮುಗಿದ ಬಳಿಕ ನಾವೆಲ್ಲರೂ ಊಟ ಮಾಡಿ ಸಂಬಂಧಿಕರ ಮನೆಗೆ ತೆರಳಿದೆವು. ನಂತರ ಮರುದಿನ ದೇವಸ್ಥಾನದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನಾವು ರಾತ್ರಿ 9 ಗಂಟೆಗೆ ಅಲ್ಲಿಂದ ಬಸ್ಟ್ಯಾಂಡಿಗೆ ಹೊರಟಿದೆವು. 11 ಗಂಟೆಗೆ ಸರಿಯಾಗಿ ಬಸ್ಸಿನಲ್ಲಿ ಬೆಂಗಳೂರಿನಿಂದ ಹೊರಟ ನಾವು ಮಾರನೇ ದಿನ ಬೆಳಿಗ್ಗೆ ತಮ್ಮ ತಮ್ಮ ಮನೆಗೆ ಮರಳಿ ಬಂದೆವು.

ಶ್ರೀಶಾರದಾ ಮಂಟಪದ ಆಡಳಿತ ಮಂಡಳಿಯು ನಮಗೆ ಬೆಂಗಳೂರಿನಲ್ಲಿ ಯಕ್ಷಗಾನ ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ನಾವು ಆಭಾರಿ ಯಾಗಿದ್ದೇವೆ.

**ಪಾತ್ರಪರಿಚಯ :** ಹಿಮ್ಮೇಳದಲ್ಲಿ ಭಾಗವತರು: ಶ್ರೀ ಚಂದ್ರಕಾಂತ ರಾವ್ ಮೂಡುಬೆಳ್ಳೆ, ಮದ್ದಳೆ: ಸಂಪತ್ ಆಚಾರಿ, ಚಂಡೆ: ಮನೋಜ್ ಆಚಾರಿ, **ಮುಮ್ಮೇಳದ ಕಲಾವಿದರು:** ಬಾಲಗೋಪಾಲರು: ಚೊಕ್ಕಾಡಿ ವಿಘ್ನೇಶ್ ದಿವಾಕರ ರಾವ್ ಮತ್ತು ಅಭಯ ಪ್ರಕಾಶ್ ರಾವ್ ಸಾಸ್ತಾವು, ಪೀಠಿಕಾ ಸ್ತ್ರೀವೇಷ: ಶ್ರೀಮತಿ ಸ್ವಾತಿ ಸಂದೀಪ್ ರಾವ್ ಮತ್ತು ಶ್ರೀಮತಿ ಶಾರ್ವರಿ ವಾಗೀಶ ರಾವ್ ತಂತ್ರಾಡಿ, ಕಂಸ 1: ವೈ.ವ್ಯಾಸ ನಾಗರಾಜ ರಾವ್ ಕಲ್ಲಂಜೆ, ನಾರದ: ವೈಷ್ಣವಿ ಕೃಷ್ಣ ರಾವ್ ಕುಕ್ಕಿಕಟ್ಟೆ, ಜರಾಸಂಧ: ಚೊಕ್ಕಾಡಿ ಶ್ರೀಕಾಂತ ರಾವ್ ಅಲೆವೂರು, ಧೂತ: ತಂತ್ರಾಡಿ ಸ್ಕಂದ ವಿಶ್ವನಾಥ ಶ್ಯಾನುಭಾಗ್, ಆಸ್ತಿ: ಚೊಕ್ಕಾಡಿ ಕಾರ್ತಿಕ್ ದಿವಾಕರ ರಾವ್, ಪ್ರಾಸ್ತಿ: ಚೊಕ್ಕಾಡಿ ಶ್ರೀನಿಧಿ ಶ್ರೀಕಾಂತ ರಾವ್, ಕಂಸ 2: ತಂತ್ರಾಡಿ ವಿಶ್ವನಾಥ ಶ್ಯಾನುಭಾಗ್, ಅಕ್ರೂರ: ಡಾ.ಮಸ್ಕಿಬೈಲು ಸಂತೋಷ್ ರಾವ್, ಕೃಷ್ಣ: ತಂತ್ರಾಡಿ ವಾಗೀಶ ಸುರೇಶ ರಾವ್, ಬಲರಾಮ: ವೈ.ವಾಗೀಶ ನಾಗರಾಜ ರಾವ್ ಕಲ್ಲಂಜೆ, ರಜಕ: ತಂತ್ರಾಡಿ ಸ್ಕಂದ ವಿಶ್ವನಾಥ ಶ್ಯಾನುಭಾಗ್, ಚಾಣೂರ: ಚೊಕ್ಕಾಡಿ ವಿಘ್ನೇಶ್ ದಿವಾಕರ ರಾವ್, ಮುಷ್ಟಿಕ: ಅಭಯಪ್ರಕಾಶ ರಾವ್ ಸಾಸ್ತಾವು, ಸಹಕಾರ: ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು, ಯು.ಅರವಿಂದ ಕುಮಾರ್, ಸಿ.ದಿವಾಕರ ರಾವ್, ಕೆ.ಪ್ರಕಾಶ್ ರಾವ್, ಸಾಸ್ತಾವು ಪ್ರಕಾಶ್ ರಾವ್ ಅಲೆವೂರು.

## ಬ್ರಹ್ಮೋಪದೇಶ

ಶ್ರೀಮತಿ ರೋಹಿಣಿ ಚೈತ್ರ ಹಾಗೂ ಶ್ರೀ ಮಹೇಶ ಕುಮಾರ್ ಅವರ ಪುತ್ರ **ಚಿ। ಪ್ರಶಸ್ತ** ಬ್ರಹ್ಮೋಪದೇಶವು ತಾ.23.06.2022 ರಂದು ಬೆಳ್ಳೆ ಅಬ್ಲಿಕಟ್ಟೆ ತಮ್ಮ ಸ್ವಗೃಹ "ಸಾಧನಾ" ದಲ್ಲಿ ಜರಗಿತು.

ಶ್ರೀಮತಿ ಶ್ಯಾಮಲ ಹಾಗೂ ದಿ. ಶ್ರೀ ವಿಘ್ನೇಶ್ ಶ್ಯಾನುಭಾಗ್ ಅವರ ಪುತ್ರ **ಚಿ। ಓಂಕಾರ್‌ನ** ಬ್ರಹ್ಮೋಪದೇಶವು ತಾ. 23.06.2022 ರಂದು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಜರಗಿತು.

## ನಿಧನ



ಭಾರತೀಯ ಸ್ಟೇಟ್ ಬ್ಯಾಂಕ್‌ನ ನಿವೃತ್ತ ಉದ್ಯೋಗಿ ಶ್ರೀ ಮಾಣಿಬೆಟ್ಟು ಪ್ರಭಾಕರ್ ರಾವ್ ಅವರು ಚಿಟ್ಪಾಡಿ ಉಡುಪಿಯಲ್ಲಿ ತಾ.27.06.2022 ರಂದು ತಮ್ಮ 71ನೇ ವಯಸ್ಸಿನಲ್ಲಿ ನಿಧನರಾದರು. ಅವರು ಪತ್ನಿ ನಿರ್ಮಲಾ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



ಶ್ರೀ ಕುಂಜಾರು ಪದ್ಮನಾಭ ರಾವ್ ಅವರು ತಮ್ಮ 89 ನೇ ವಯಸ್ಸಿನಲ್ಲಿ ತಾ. 27.06.2022 ರಂದು ಥಾಣೆಯಲ್ಲಿ ನಿಧನರಾದರು. ಅವರು ಓರ್ವ ಪುತ್ರನನ್ನು ಅಗಲಿದ್ದಾರೆ.

**** ****



ದಿ. ಸುಬ್ಬರಾವ್ (ಓಂತಿಬೆಟ್ಟು ಹಿರಿಯಡ್ಕ) ಇವರ ಪತ್ನಿ ಶ್ರೀಮತಿ ಶಾಂತಾ ಅವರು ತಮ್ಮ 72ನೇ ವಯಸ್ಸಿನಲ್ಲಿ ತಾ.07.07.2022ರಂದು ಅಹಮದಾ ನಗರದಲ್ಲಿ ನಿಧನರಾದರು. ಅವರು ಮೂವರು ಪುತ್ರರನ್ನು ಅಗಲಿದ್ದಾರೆ.

**** ****



ಶ್ರೀ ಮಾರ್ಪಳ್ಳಿ ಶ್ರೀನಿವಾಸ ರಾವ್ ಅವರು 72 ನೇ ವಯಸ್ಸಿನಲ್ಲಿ ಹೃದಯಾಘಾತದಿಂದ 09-07-2022ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

## ಶುಭ ವಿವಾಹ

ಶ್ರೀ ಡಾ। ಹರಪ್ರಸಾದ ತುದಿಯಡ್ಕ ಹಾಗೂ ಶ್ರೀಮತಿ ಶಶಿಕಲಾ ಇವರ ಪುತ್ರಿ **ಚಿ। ಸೌ। ಅಖಿಲಾ** ಮತ್ತು ಶ್ರೀ ರಘುವೀರ (ಅಶೋಕ) ರಾವ್ ಹಾಗೂ ಶ್ರೀಮತಿ ಸರೋಜ ಇವರ ಪುತ್ರ **ಚಿ। ರಜತ್** ಇವರ ವಿವಾಹವು ತಾ.17.06.2022ರಂದು ಸುಳ್ಯ ಓಡಬ್ಬಾಯಲ್ಲಿರುವ 'ಕುಂಭಕ್ಕೋಡು ಕಸ್ತೂರಿ ಅಚ್ಯುತ ಭಟ್ ಶಶಿಕಲಾ ಕಲಾ ಮಂದಿರ' ದಲ್ಲಿ ಜರಗಿತು.

**** ****

ಶ್ರೀ ಜಗದೀಶ ರಾವ್ ಕುಕ್ಕೆಹಳ್ಳಿ ಹಾಗೂ ಶ್ರೀಮತಿ ಉಷಾ ಇವರ ಪುತ್ರಿ **ಚಿ। ಸೌ। ಸುಮಧುರ** ಮತ್ತು ಶ್ರೀ ಸುಬ್ಬಣ್ಣ ಮೈಸೂರು ಹಾಗೂ ಶ್ರೀಮತಿ ಸುಂದರಮ್ಮ ಇವರ ಪುತ್ರ **ಚಿ। ಮಂಜುಪ್ರಶಾಂತ್ ಎಸ್.** ಇವರ ವಿವಾಹವು ತಾ.17.06.2022ರಂದು ಪರ್ಕಳ ಸುರಕ್ಷಾ ಸಭಾ ಭವನದಲ್ಲಿ (ಪರ್ಕಳ ಪ್ರೌಢಶಾಲೆ ಎದುರು) ಜರಗಿತು.

**** ****

ಶ್ರೀ ರತ್ನಾಕರ್ ರಾವ್ ಹಾಗೂ ಶ್ರೀಮತಿ ಗಾಯತ್ರಿ ರಾವ್ ಇವರ ಪುತ್ರಿ **ಚಿ। ಸೌ। ರಾಜೇಶ್ವರಿ** ಮತ್ತು ಶ್ರೀ ವಸಂತ ಕುಮಾರ್ ಹಾಗೂ ಶ್ರೀಮತಿ ಶಶಿಪ್ರಭಾ ರಾವ್ ಇವರ ಪುತ್ರ **ಚಿ। ಶ್ರೀನಿಧಿ** ಇವರ ವಿವಾಹವು ತಾ.23.06.2022 ರಂದು ಶ್ರೀ ಸುಬ್ರಹ್ಮಣ್ಯ ಸಭಾ ಭವನ, ಲೈಲಾ, ಬೆಳ್ತಂಗಡಿಯಲ್ಲಿ ಜರಗಿತು.

**** ****

ಶ್ರೀ ಸುಬ್ರಾಯ ಉಬರಳೆ ಹಾಗೂ ಶ್ರೀಮತಿ ಪ್ರಫುಲ್ಲಾ ಇವರ ಪುತ್ರಿ **ಚಿ। ಸೌ। ರಾಜಲಕ್ಷ್ಮೀ** ಮತ್ತು ಶ್ರೀಮತಿ ಶ್ಯಾಮಲ ಹಾಗೂ ವಿಘ್ನೇಶ್ ಶ್ಯಾನುಭಾಗ್ ಇವರ ಪುತ್ರ **ಚಿ। ಓಂಕಾರ್** ಇವರ ವಿವಾಹವು ತಾ.23.06.2022ರಂದು ಬೆಂಗಳೂರಿನ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಮಂಟಪದಲ್ಲಿ ಜರಗಿತು.

## ನಾಮಕರಣ

ಶ್ರೀ ಪ್ರದೀಪ್‌ಕುಮಾರ್ ಎಲ್ಲೂರು ಹಾಗೂ ಶ್ರೀಮತಿ ನಿವೇದಿತಾ.ಬಿ ರವರ ಮೊಮ್ಮಗ ಮತ್ತು ಶ್ರೀ ಮನೋಜ್ ರಾವ್ ಎಲ್ಲೂರು ಹಾಗೂ ಶ್ರೀಮತಿ ಮಧುವನಿ ಇವರ ಪುತ್ರ **ಚಿ। ಮನನ್ ರಾವ್ ಎಲ್ಲೂರು** ಇವನ ನಾಮಕರಣ ಸಮಾರಂಭವು ತಾ.19.06.2022ರಂದು ಉಡುಪಿಯ ಕನ್ನರ್ಪಾಡಿ ಜಯಕೃಪಾ ಸಭಾಭವನದಲ್ಲಿ ನೆರವೇರಿತು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ: ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.15-08-2022 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

ತಾ.08-08-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.18-07-2022, ತಾ.02-08-2022 ಮತ್ತು ತಾ.16-08-2022 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಕರ್ಕಾಟಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16.07.2022 | ಕರ್ಕಾಟಕ ಸಂಕ್ರಮಣ, ದಕ್ಷಿಣಾಯನ ಆರಂಭ | 08.08.2022 | ಸರ್ವೈಕಾದಶಿ |
| | ಸಂಕಷ್ಟಹರ ಚತುರ್ಥಿ | 11.08.2022 | ಯಜುರುಪಾಕರ್ಮ, ರಕ್ಷಾಬಂಧನ |
| | ಚಂದ್ರೋದಯ ರಾತ್ರಿ 9.39 | 12.08.2022 | ಆಟಿ ಹುಣ್ಣಿಮೆ |
| 24.07.2022 | ಸರ್ವೈಕಾದಶಿ | 13.08.2022 | ವರ್ಷ ಋತು ಶ್ರಾವಣ ಮಾಸದ ಕೃಷ್ಣಪಕ್ಷಾರಂಭ |
| 28.07.2022 | ಆಟಿ ಅಮಾವಾಸ್ಯೆ | 15.08.2022 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.38 |
| 29.07.2022 | ವರ್ಷ ಋತು ಶ್ರಾವಣ ಮಾಸದ ಶುಕ್ಲಪಕ್ಷಾರಂಭ | | |
| 02.08.2022 | ನಾಗರಪಂಚಮಿ, ಮಂಗಳಗೌರಿವ್ರತ | 17.08.2022 | ಸಿಂಹ ಸಂಕ್ರಮಣ |
| | | 18.08.2022 | ಶ್ರೀ ಕೃಷ್ಣ ಜನ್ಮಾಷ್ಟಮಿ |
| 05.08.2022 | ವರಮಹಾಲಕ್ಷ್ಮೀ ವ್ರತ | 19.08.2022 | ಶ್ರೀ ಕೃಷ್ಣ ಲೀಲೋತ್ಸವ-ವಿಟ್ಲಪಿಂಡಿ |


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**

*With Best Complimemts From*

SRI M. SHAILESH RAO B.E., Civil Ph : 9448624324

**Civil Engineer & Contractor**

**SRI MALAVIKA ASSOCIATES**

KALSANKA-UDUPI ROAD, UDUPI.

**Website : shreemaalavikaassociates.com**

# ಸರ್ಕಾರದ ಆಯೋಗಕ್ಕೆ ಸಂಶೋಧಕರಾಗಿ ನೇಮಕ



ಬ್ರಹ್ಮಾವರ ಎಸ್.ಎಂ.ಎಸ್ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ವೈ.ರವೀಂದ್ರನಾಥ ರಾವ್ ಅವರನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮಾನವಶಾಸ್ತ್ರಜ್ಞ/ಸಮಾಜಶಾಸ್ತ್ರಜ್ಞ (ಸಂಶೋಧಕ) ರಾಗಿ ಎರಡು ವರ್ಷಗಳ ಅವಧಿಗೆ ರಾಜ್ಯ ಸರ್ಕಾರವು ನೇಮಕ ಮಾಡಿ ಆದೇಶಿಸಿದೆ.

ಜಾತಿ, ಜನಾಂಗಕ್ಕೆ ಸಂಬಂಧಿಸಿದ ಸಂಶೋಧನೆ, ವಿಶ್ಲೇಷಣೆ ಹಾಗೂ ವರದಿಗಳನ್ನು, ಹಿಂದುಳಿದಿರುವಿಕೆಯ ಮಾನದಂಡಗಳನ್ನು ಸಿದ್ಧಪಡಿಸುವುದು ಮತ್ತು ಆಯೋಗವು ಕಾಲಕಾಲಕ್ಕೆ ಸೂಚಿಸುವ ಇತರ ಕರ್ತವ್ಯಗಳು ಅವರು ನಿರ್ವಹಿಸತಕ್ಕ ಮುಖ್ಯ ಕಾರ್ಯಗಳಾಗಿವೆ. ಅನೇಕ ಸಂಶೋಧನೆ, ಪ್ರಕಟಣೆಗಳನ್ನು ನಡೆಸಿ ದೇಶ, ವಿದೇಶಗಳಲ್ಲಿ ಮನ್ನಣೆಗಳಿಸಿರುವ ಡಾ.ರಾವ್ ಅವರನ್ನು ಗುರುತಿಸಿ ಸರ್ಕಾರವು ನೀಡಿದ ಈ ಹುದ್ದೆಯು ಒಂದು ಘನತೆಯಾಗಿದೆ.

# ಮಂಗಳೂರಿನ ಸುಬ್ರಹ್ಮಣ್ಯ ಸಭಾಕ್ಕೆ ದೇಣಿಗೆ



ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಶ್ರೀ ಕೆ.ಆರ್. ಉಪಾಧ್ಯಾಯರವರು ತಮ್ಮ ಹಾಗೂ ಧರ್ಮಪತ್ನಿ ಶ್ರೀಮತಿ ಕಟೀಲು ಸುಶೀಲಾ ಉಪಾಧ್ಯಾಯರವರ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ರೂ.10 ಲಕ್ಷ, ತಮ್ಮ ಮಾತಾಪಿತರಾದ ಶ್ರೀ ಕಟೀಲು ನಾರಾಯಣ ಉಪಾಧ್ಯಾಯ ಮತ್ತು ಸ್ಮಾರಕ ರೂ.50,000/-, ತಮ್ಮ ಅಜ್ಜ, ಅಜ್ಜಿಯರಾದ ಬ್ರಹ್ಮಶ್ರೀ ಕಟೀಲು ರಾಮಪ್ಪ ಉಪಾಧ್ಯಾಯ ಮತ್ತು ಕಾವೇರಿಯಮ್ಮ ಸ್ಮಾರಕ ರೂ. 50,000/- ಗಳ ವಿದ್ಯಾರ್ಥಿ ವೇತನ ನಿಧಿಯನ್ನು ಸ್ಥಾಪಿಸಿದ್ದಾರೆ. ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ "ಶಿವಸದನ" ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ.1,00,000/- (ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದಕ್ಕೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಕಾರ್ಯಕ್ರಮದಲ್ಲಿ ಶ್ರೀ ಕೆ.ಆರ್. ಉಪಾಧ್ಯಾಯರ ಸೋದರಳಿಯ ಡಾ. ಅರವಿಂದ್ ರಾವ್, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಉಪಾಧ್ಯಕ್ಷರುಗಳಾದ ಡಾ. ಎ. ಪಿ.ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ನಿರ್ದೇಶಕರುಗಳು, ಯುವ ವೇದಿಕೆ ಪಧಾಧಿಕಾರಿಗಳು, ಮಹಿಳಾ ವೇದಿಕೆ ಪದಾಧಿಕಾರಿಗಳು, ಸದಸ್ಯರುಗಳು ಭಾಗವಹಿಸಿದ್ದರು. "ಶಿವ ಸದನ" ವಸತಿ ನಿಲಯವು ಸಮಾಜ ಭಾಂದವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಹಾರಿ ವಸತಿ ನಿಲಯದಲ್ಲಿ ಈಗಾಗಲೆ 34 ಕ್ಕೂ ಹೆಚ್ಚು ನಿವಾಸಿಗಳಿದ್ದು ಮಿತ ದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ. ಸಂಪರ್ಕಿಸಿ: ಶ್ರೀ ಕರುಣ್ ರಾವ್ ಬೆಳ್ಳೆ ಮೊ: 7337634359. ಪಿ.ಶ್ರೀಕಾಂತ್ ರಾವ್ ಮೊ: 7795116598.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಸುರತ್ಕಲ್ "ಶಂಕರ ಜಯಂತಿ ಆಚರಣೆ"



ತಾ.08.05.2022 ನೇ ರವಿವಾರ ನಮ್ಮ ಸಂಘದ ವತಿಯಿಂದ ಸುರತ್ಕಲ್ ಗೋವಿಂದದಾಸ ಕಾಲೇಜು ಸುರತ್ಕಲ್ ಇದರ ಎದುರುಗಡೆ ಇರುವ "ಮಾನಸ" ಕಟ್ಟಡದಲ್ಲಿರುವ "ವಿವೇಕಾನಂದ ಸಭಾಗೃಹ"ದಲ್ಲಿ ಸಂಜೆ 5.30 ಕ್ಕೆ ಸರಿಯಾಗಿ "ಶಂಕರ ಜಯಂತಿ" ಯನ್ನು ಆಚರಿಸಲಾಯಿತು. ಶಂಕರಾಚಾರ್ಯರ ಜೀವನ ಚರಿತ್ರೆಯ ಬಗ್ಗೆ ಕರ್ನಾಟಕ ಆಯುರ್ವೇದ ಕಾಲೇಜು, ಮಂಗಳೂರಿನ ಎಚ್.ಒ.ಡಿ ಹಾಗೂ ಜ್ಯೋತಿಷ್ಯದಲ್ಲಿ ಎಂ.ಎ, ಸಂಸ್ಕೃತದಲ್ಲಿ ಎಂ.ಎ. ಪಡೆದಿರುವ ಡಾ. ಹರಿಹರ ಪ್ರಸಾದ್‌ರವರು ಮನಮುಟ್ಟುವಂತೆ ವಿವರಿಸಿದರು. ಬಳಿಕ ನಮ್ಮ ಸಮಾಜದ ನಾಲ್ವರನ್ನು ಗೌರವಿಸಲಾಯಿತು. ನಮ್ಮ ಸಂಘದ ಭಜನಾ ಗುರುಗಳಾದ ಶ್ರೀ ಹರಿನಾರಾಯಣ್ ಹಾಗೂ ಕ್ಷಮಾ ಗೌರಿ ದಂಪತಿಗಳು, ಹಾರ್ಮೋನಿಯಂ ಗುರುಗಳಾದ ಶ್ರೀ ಕೃಷ್ಣರಾಜ ರಾವ್, ತಬಲ ವಾದಕರಾದ ಶ್ರೀ ಸುದರ್ಶನ್ ರಾವ್ ಇವರನ್ನು ಸನ್ಮಾನಿಸಲಾಯಿತು.

ನಂತರ ನಮ್ಮ ಸಂಘದ ಭಜನಾ ಮಂಡಳಿಯ ಸದಸ್ಯೆಯರಿಂದ ಭಜನೆಯು ನಡೆಯಿತು. ಆ ಬಳಿಕ ಶ್ರೀ ಸುಬ್ರಹ್ಮಣ್ಯ ರಾವ್ ಪಾವಂಜೆ ಇವರ ನೇತೃತ್ವದಲ್ಲಿ ಪೂಜೆ ನಡೆಯಿತು. ಈ ಎಲ್ಲಾ ಕಾರ್ಯಕ್ರಮಗಳು ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ನೇತೃತ್ವದಲ್ಲಿ ಹಾಗೂ ಪದಾಧಿಕಾರಿಗಳು, ಯುವ ವೇದಿಕೆ ಪದಾಧಿಕಾರಿಗಳು ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷೆ ಹಾಗೂ ಇತರ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯಿತು. ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್ ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಶ್ರೀ ಪ್ರವೀಣ್ ಕುಮಾರ್ ಮತ್ತು ಬಳಗ ಸಂಜೆಯ ಉಪಹಾರದ ವ್ಯವಸ್ಥೆಯನ್ನು ಮಾಡಿದರು.

# ಹರ್ಷಕುಮಾರ್ ಕೇದಗೆ ದಂಪತಿಯವರಿಗೆ ಜಿಲ್ಲಾ ಲಯನ್ಸ್ ಪ್ರಶಸ್ತಿ







ತಾ.03.07.2022ರಂದು ಬಂಟ್ವಾಳದ "ಬಾಜರ್ ಆಡಿಟೋರಿಯಂನಲ್ಲಿ" ಜರಗಿದ "ಲಯನ್ಸ್ ಪ್ರಶಸ್ತಿ ಪ್ರಧಾನ" ಸಮಾರಂಭದಲ್ಲಿ ದಕ್ಷಿಣ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ ಲಯನ್ಸ್ ಜಿಲ್ಲೆ 371-ಡಿ ಅಂತರ್‌ರಾಷ್ಟ್ರೀಯ ಸೇವಾ ಸಂಸ್ಥೆಯಲ್ಲಿ ಹರ್ಷಕುಮಾರ್ ಕೇದಗೆ ಹಾಗೂ ಕನಕವಲ್ಲಿ ಎಚ್. ಕೇದಗೆ ದಂಪತಿಗಳಿಗೆ ಜಿಲ್ಲಾ ಲಯನ್ಸ್ ಪ್ರಶಸ್ತಿಯನ್ನು ಜಿಲ್ಲಾ ಗವರ್ನರ್ Lion M.J.F. ವಸಂತ ಕುಮಾರ್ ಶೆಟ್ಟಿ ದಂಪತಿಗಳು ನೀಡಿ ಗೌರವಿಸಿದರು.




ಶ್ರೀಮತಿ ಗಾಯತ್ರಿ ಅರವಿಂದ ರಾವ್ ಕೇದಿಗೆ ನೇತ್ರಾವತಿ ಲಯನ್ಸ್ ಕ್ಲಬ್ ಮಂಗಳೂರು ಇವರಿಗೆ ಬೆಸ್ಟ್ ಪ್ರೆಸಿಡೆಂಟ್ ಅವಾರ್ಡ್ ಲಭಿಸಿದೆ.



ಮೈಸೂರಿನ ಕಲಾಮಂದಿರದಲ್ಲಿ ನಡೆದ ನೃತ್ಯ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀಮನ್ಮಹಾರಾಜ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಜತೆ ಪ್ರೊ.ಕೆ. ರಾಮಮೂರ್ತಿ ರಾವ್ ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು.


**ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘ (ರಿ.)**
**ಪುತ್ತೂರು ಮಿತ್ರ ಸಮಾಜ, ಪುತ್ತೂರು, ಶ್ರೀ ಶಂಕರ ಪ್ರತಿಷ್ಠಾನ, ಪುತ್ತೂರು ಶಾಖೆ ಹಾಗೂ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ**
**ಕೋಡಿಂಬಾಡಿ, ಪುತ್ತೂರು, ದ.ಕ. ಮೊ : 9901247080**

ಆತ್ಮೀಯರೇ,

ತಾರೀಕು 24.07.2022ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 8.00 ರಿಂದ

**ಆಟಿದ ಕೂಟ ಮತ್ತು ಕೆಸರು ಗದ್ದೆ ಓಟ**

ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ವಠಾರದಲ್ಲಿ ಆಚರಿಸಲಿರುವುದರಿಂದ ತಾವೆಲ್ಲರೂ ಬಂದು ಭಾಗವಹಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸುತ್ತೇವೆ.

-ಅಧ್ಯಕ್ಷರು ಮತ್ತು ಸರ್ವಸದಸ್ಯರು

**ಕಾರ್ಯಕ್ರಮ :**

| | |
|---|---|
| ಬೆಳಿಗ್ಗೆ ಗಂಟೆ 8.00ಕ್ಕೆ | : ದೀಪ ಬೆಳಗಿಸಿ ಉದ್ಘಾಟನೆ ಹಾಗೂ ಪ್ರಾರ್ಥನೆ. |
| ಬೆಳಿಗ್ಗೆ ಗಂಟೆ 8.15ಕ್ಕೆ | : ಉಪಹಾರ |
| ಬೆಳಿಗ್ಗೆ ಗಂಟೆ 9.00ರಿಂದ | : ಕೆಸರು ಗದ್ದೆಯಲ್ಲಿ ವಿವಿಧ ಆಟೋಟ ಸ್ಪರ್ಧೆ |
| ಮಧ್ಯಾಹ್ನ ಗಂಟೆ 1.00ಕ್ಕೆ | : ಭೋಜನ |
| ಮಧ್ಯಾಹ್ನ ಗಂಟೆ 3.30ರಿಂದ | : ಆಟಿದ ಕೂಟ-ಸಾಂಸ್ಕೃತಿಕ ಕಾರ್ಯಕ್ರಮ |
| ಸಂಜೆ ಗಂಟೆ 5.30ಕ್ಕೆ | : ಉಪಹಾರ ಮತ್ತು ನಮ್ಮ ಸಮಾಜದ ಬಗ್ಗೆ ಚಿಂತನೆ. |

**ಪುತ್ತೂರಿನಿಂದ ವಾಹನದ ವ್ಯವಸ್ಥೆ ಬೇಕಾದವರು ಯನ್.ಕೆ. ಜಗನ್ನಿವಾಸ ರಾವ್ (944826088), ಸದಾನಂದ ರಾವ್ ಎಸ್ (9480347651), ಡಾ. ಸುಧೀರ್ ಟಿ. (9980342869 ಇವರನ್ನು ಸಂಪರ್ಕಿಸಬೇಕಾಗಿ ವಿನಂತಿ**

ಬರುವಾಗ ಒಂದು ಎಕ್ಸ್ಟ್ರಾ ಡ್ರೆಸ್ ಮತ್ತು ಬೈರಾಸು ತೆಗೆದುಕೊಂಡು ಬರತಕ್ಕದ್ದು.



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

## ಎಸ್‌ಎಸ್‌ಎಲ್‌ಸಿ ಸಾಧಕರು



### ಧನ್ಯಶ್ರೀ

ಪಡುಬಿದ್ರಿಯ ರವಿಪ್ರಕಾಶ್ ಹಾಗೂ ಮಮತಾ ರಾವ್ ದಂಪತಿಗಳ ಪುತ್ರಿ ಧನ್ಯಶ್ರೀ ಪ್ರಸ್ತುತ ಸಾಲಿನ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ 625/625 (100%) ಅಂಕಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿರುತ್ತಾರೆ.



### ಪ್ರಜ್ಞಾ ಎನ್. ರಾವ್

ಶ್ರೀ ನರೇಂದ್ರ ಎಸ್. ರಾವ್ ಹಾಗೂ ಶ್ರೀಮತಿ ಜ್ಯೋತಿ. ಎನ್. ರಾವ್ ದಂಪತಿಗಳ ಪುತ್ರಿ ಪ್ರಜ್ಞಾ ಎನ್. ರಾವ್ ಪ್ರಸ್ತುತ ಸಾಲಿನ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ 624/625 ಅಂಕಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

## ದ್ವಿತೀಯ ಪಿಯುಸಿ ಸಾಧಕರು



### ಯಜ್ಞೇಶ್ ರಾವ್

ಕಡಬ ಶ್ರೀ ಗಣೇಶ್ ರಾವ್ ಹಾಗೂ ಶ್ರೀಮತಿ ಅನುಪಮಾ ರಾವ್ ದಂಪತಿಗಳ ಪುತ್ರ ಯಜ್ಞೇಶ್ ರಾವ್ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 98.1% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಶ್ರೀವರ್ಧನ್

ನಾರಾವಿ ರವಿಶಂಕರ ರಾವ್ ಹಾಗೂ ಶ್ರೀಮತಿ ಪೂರ್ಣಿಮಾರವರ ಪುತ್ರ ಶ್ರೀವರ್ಧನ್ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 586 (97.66%) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಸಾತ್ವಿಕ್

ಡಾ. ಸಂತೋಷ್ ಕುಮಾರ್ ಅಡೂರು ಹಾಗೂ ಡಾ. ಗೀತಾ ಸಂತೋಷ್ ದಂಪತಿಗಳ ಪುತ್ರ ಸಾತ್ವಿಕ್ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 584 (97.33%) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಅವರು ಇತ್ತೀಚೆಗೆ ನಡೆದ ಕಿಶೋರ ವೈಜ್ಞಾನಿಕ್ ಪ್ರೋತ್ಸಾಹನ್ ಯೋಜನಾ ಪರೀಕ್ಷೆಯಲ್ಲಿ 552ನೇ ಶ್ರೇಣಿಯಲ್ಲಿ ಉತ್ತೀರ್ಣನಾಗಿರುತ್ತಾರೆ.




### ಸುದರ್ಶನ್ ಬಿ.

ಶ್ರೀ ಮುರಳಿಕೃಷ್ಣ ಬಿ. ಹಾಗೂ ಶ್ರೀಮತಿ ನಯನಾ ಮುರಳಿಕೃಷ್ಣ ದಂಪತಿಗಳ ಪುತ್ರ ಸುದರ್ಶನ್ ಬಿ. ಪುತ್ತೂರಿನ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 97% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.




### ಕು. ಅನಲಾ ರಾವ್

ಶ್ರೀ ಎನ್.ಎಸ್. ಪ್ರಶಾಂತ್ ಹಾಗೂ ಶ್ರೀಮತಿ ಅನಿತಾ ಪ್ರಶಾಂತ್ ದಂಪತಿಗಳ ಪುತ್ರಿ ಕು. ಅನಲಾ ರಾವ್ ಬೆಂಗಳೂರಿನ ಆರ್.ವಿ. ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯಲ್ಲಿ 97% ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಪ್ರಾರ್ಥನಾ ರಾವ್

ಶ್ರೀ ಅನಿಲ್ ರಾವ್ ಹಾಗೂ ಶ್ರೀಮತಿ ಭಾರತಿ ರಾವ್ ದಂಪತಿಗಳ ಪುತ್ರಿ ಪ್ರಾರ್ಥನಾ ರಾವ್ ದ್ವಿತೀಯ ಪಿಯುಸಿಯಲ್ಲಿ 97% ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.




### ಪ್ರೇರಣಾ ರಾವ್

ಶ್ರೀ ವಿನಯ ಕುಮಾರ್ ಅದ್ಯಪಾಡಿ ಹಾಗೂ ಶ್ರೀಮತಿ ನಿರ್ಮಲ ರಾವ್ ಪಿ ದಂಪತಿಗಳ ಪುತ್ರಿ ಪ್ರೇರಣಾ ರಾವ್ ಅದ್ಯಪಾಡಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 96.8% ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಅಕ್ಷಯ್ ಕುಮಾರ್

ಉಡುಪಿ ಶ್ರೀ ವೈ. ಪ್ರಸಾದ್ ಕುಮಾರ್ ಹಾಗೂ ಶ್ರೀಮತಿ ಸುನೀತಾ ದಂಪತಿಗಳ ಪುತ್ರ ಅಕ್ಷಯ್ ಕುಮಾರ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 96.6% ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಜ್ಞಾನೇಶ್ ರಾವ್

ಮೂಡಬಿದ್ರೆ ಶ್ರೀ ಅಂಬೂರಿ ಜನಾರ್ಧನ್ ರಾವ್ ಹಾಗೂ ಶ್ರೀಮತಿ ಪ್ರತಿಮಾ ದಂಪತಿಗಳ ಪುತ್ರ ಜ್ಞಾನೇಶ್ ರಾವ್ ದ್ವಿತೀಯ ಪಿಯುಸಿಯಲ್ಲಿ 579 (96.5%) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.




### ಆದಿತ್ಯ ರಾವ್

ಉಡುಪಿ ಚಿಟ್ಪಾಡಿ ಶ್ರೀ ಎಂ. ಸಂತೋಷ ರಾವ್ ಹಾಗೂ ಶ್ರೀಮತಿ ಜ್ಯೋತಿ ದಂಪತಿಗಳ ಪುತ್ರ ಆದಿತ್ಯ ರಾವ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 94.33% ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಕು. ಶರಣ್ಯ

ಹೆಜಮಾಡಿಯ ಕೃಷ್ಣರಾಜ್ ಭಟ್ ಹಾಗೂ ಮಮತಾ ದಂಪತಿಗಳ ಪುತ್ರಿ ಕು. ಶರಣ್ಯ ಇವರು ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ 94% ಅಂಕಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಸಂಜಯ್ ರಾವ್

ಶ್ರೀ ಸತೀಶ್ ರಾವ್ ಹಾಗೂ ಶ್ರೀಮತಿ ಚೈತ್ರ ದಂಪತಿಗಳ ಪುತ್ರ ಸಂಜಯ್ ರಾವ್ ಹೆಬ್ರಿಯ ಎಸ್.ಆರ್. ಕಾಲೇಜಿನಲ್ಲಿ ಇ.ಬಿ.ಎ.ಎಸ್. ನಲ್ಲಿ 93.16% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ವಲ್ಲಭ ರಾವ್

ಶ್ರೀ ಯು.ವಿಜಯಚಂದ್ರ ಹಾಗೂ ಶ್ರೀಮತಿ ಶುಭ ವಿ.ರಾವ್ ದಂಪತಿಗಳ ಪುತ್ರ ವಲ್ಲಭ ರಾವ್ ಮಂಗಳೂರಿನ ಸಿ.ಎಫ್.ಎ.ಎಲ್ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 93% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.




### ಅದಿತಿ

ಶ್ರೀ ಗಣೇಶ್ ಜನಾರ್ಧನ ರಾವ್ ಹಾಗೂ ಶ್ರೀಮತಿ ಪಾವನ ಗಣೇಶ್ ರಾವ್ ದಂಪತಿಗಳ ಪುತ್ರಿ ಅದಿತಿ ಗಣೇಶ್ ರಾವ್ ಉಡುಪಿ ವಿದ್ಯೋದಯ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 93% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಸಿದ್ಧಾರ್ಥ್ ಯು. ರಾವ್

ಪೆರಾಡಿ ಉದಯ ಭಟ್ ಹಾಗೂ ಶ್ರೀಮತಿ ಸುಮಿತ್ರಾ ದಂಪತಿಗಳ ಪುತ್ರ ಸಿದ್ಧಾರ್ಥ್ ಯು. ರಾವ್ ದ್ವಿತೀಯ ಪಿಯುಸಿಯಲ್ಲಿ 93% ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಪ್ರಣವ್

ಶ್ರೀ ಅಶೋಕ ರಾವ್ ಹಾಗೂ ಶ್ರೀಮತಿ ವಿಂಧ್ಯಾ ರಾವ್ ದಂಪತಿಗಳ ಪುತ್ರ ಪ್ರಣವ್ ದ್ವಿತೀಯ ಪಿಯುಸಿಯ ವಿಜ್ಞಾನ ವಿಭಾಗದಲ್ಲಿ 93% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.



### ಅಮೂಲ್ಯ

ಮುಂಡ್ಕೂರು ಶ್ರೀ ಅರುಣ್ ರಾವ್ ಹಾಗೂ ಶ್ರೀಮತಿ ರಮ್ಯಾ ಅರುಣ್ ರಾವ್ ಇವರ ಸುಪುತ್ರಿ ಅಮೂಲ್ಯ ಇವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 550 (91.66%) ಅಂಕಗಳನ್ನು ಪಡೆದು ಉತ್ತೀರ್ಣರಾಗಿರುತ್ತಾರೆ.



### ಸುಮಂತ್ ರಾವ್

ಕಟೀಲು ಶ್ರೀ ಶ್ರೀಕಾಂತ್ ರಾವ್ ಹಾಗೂ ಶ್ರೀಮತಿ ಸುಮಂಗಲ ರಾವ್ ಇವರ ಸುಪುತ್ರ ಸುಮಂತ್ ರಾವ್‌ರವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 540 (90%) ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

## ಶಾಂಕರ ತತ್ವ ಪ್ರಸಾರ ಅಭಿಯಾನದ ಉಡುಪಿ ಜಿಲ್ಲಾ ಸಂಚಾಲಕರಾಗಿ ಶ್ರೀ ಟಿ.ವಿಶ್ವನಾಥ ಶ್ಯಾನುಭಾಗ್



ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಂ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಶಾಂಕರತತ್ವ ಪ್ರಸಾರ ಅಭಿಯಾನದ ಉಡುಪಿ ಜಿಲ್ಲಾ ಸಂಚಾಲಕರಾಗಿದ್ದ ಶ್ರೀ ಪ್ರಫುಲ್ಲಚಂದ್ರ ರಾಯರ ನಂತರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ನಿರ್ದೇಶಕರೂ, ಶ್ರೀ ಶಾರದಾ ಯಕ್ಷಗಾನ ಕಲಾವಿದರು, ಉಡುಪಿ ಇದರ ಸಂಚಾಲಕರೂ ಆಗಿರುವ ಶ್ರೀ ಟಿ. ವಿಶ್ವನಾಥ್ ಶ್ಯಾನುಭಾಗರು ಉಡುಪಿ ಜಿಲ್ಲಾ ನೂತನ ಸಂಚಾಲಕರಾಗಿ ಶ್ರೀ ಶಾರದಾ ಪೀಠದಿಂದ ನಿಯೋಜನೆಗೊಂಡಿದ್ದಾರೆ.

## ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಗೆ ನಿರ್ದೇಶಕರಾಗಿ ವೈ.ಪ್ರಕಾಶ್ ಕುಮಾರ್



ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ಆಡಳಿತ ಮಂಡಳಿಯ ಸಭೆಯಲ್ಲಿ ತೆರವಾದ ನಿರ್ದೇಶಕ ಸ್ಥಾನಕ್ಕೆ ಉಡುಪಿಯ ವೈ.ಪ್ರಕಾಶ್ ಕುಮಾರ್‌ರವರು ಅವಿರೋಧವಾಗಿ ಆಯ್ಕೆಯಾಗಿರು ತ್ತಾರೆ. ಇವರು ನಮ್ಮ ಶ್ರೀ ಶಾರದಾ ಮಂಟಪದ ಆಡಳಿತ ಮಂಡಳಿಯಲ್ಲಿ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. ಅವರಿಗೆ ಶ್ರೀಶಾರದಾ ಅಭಿನಂದನೆಗಳು.



## ಶ್ರೀಮತಿ ವತ್ಸಲಾ ಇವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ

ಶ್ರೀ ಯು.ಜಿ.ಸುರೇಶ್ ಇವರ ಪತ್ನಿ ಶ್ರೀಮತಿ ವತ್ಸಲಾ, ಉಪ ಕಾರ್ಯದರ್ಶಿ, ಹಣಕಾಸು ವಿಭಾಗ, ವಿಧಾನ ಸೌಧ, ಬೆಂಗಳೂರು ಇವರು ಕರ್ನಾಟಕ ಸರ್ಕಾರದಿಂದ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಪಡೆದಿದ್ದಾರೆ. ಅವರಿಗೆ ಶ್ರೀಶಾರದಾ ಅಭಿನಂದನೆಗಳು.



## ಶ್ರೀಮತಿ ಶೈಲಶ್ರೀ ಪ್ರಕಾಶ್ ಇವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ

ಶ್ರೀ ಪ್ರಕಾಶ್ ಬಿಕ್ಕೋಡು ಅವರ ಪತ್ನಿ ಶ್ರೀಮತಿ ಶೈಲಶ್ರೀ ಪ್ರಕಾಶ್ ಅವರು ಕರ್ನಾಟಕ ಸರ್ಕಾರದ ಸರ್ವೋತ್ತಮ ಪ್ರಶಸ್ತಿ ಪಡೆದಿದ್ದಾರೆ. ಅವರು ದಿವಂಗತ ರಾಯೀ ಶಿವರಾಜ ಶರ್ಮಾ ಮತ್ತು ದಿವಂಗತ ವಸಂತಿ ಶರ್ಮಾ ಅವರ ಪುತ್ರಿ. ಅವರು ಪ್ರಸ್ತುತ ಚಿಕ್ಕಮಗಳೂರು ಡಿಸಿ ಕಛೇರಿಯಲ್ಲಿ ಶಿರಸ್ತೇದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಶ್ರೀಶಾರದಾ ಅಭಿನಂದನೆಗಳು.



ಕೊಡಿಗೆಹಳ್ಳಿ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಪ್ರಭಾಕರ ಭಂಡಿಯವರೊಂದಿಗೆ ಉಳಿದ ಸದಸ್ಯರು.

## ನೂತನ ವಧೂವರರಿಗೆ ಅಭಿನಂದನೆಗಳು



### ಚಿ। ಹರ್ಷದ್ ಹಾಗೂ ಚಿ। ಸೌ। ಅಪೇಕ್ಷಾ

ತಾ.06.06.2022ನೇ ಸೋಮವಾರ ಮಂಗಳೂರು ಬಿಜೈಯಲ್ಲಿರುವ "ಶ್ರೀ ಸುಬ್ರಹ್ಮಣ್ಯ ಸಭಾಭವನ"ನಲ್ಲಿ ಜರುಗಿದ ವಿವಾಹ ಮಹೋತ್ಸವಕ್ಕೆ ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

ಶುಭ ಕೋರುವ

ಶ್ರೀಮತಿ ಮಮತ ಮತ್ತು ಶ್ರೀ ಗುರುಪ್ರಸಾದ್ ರಾವ್, ಶಿವಬಾಗ್, ಮಂಗಳೂರು
ಶ್ರೀಮತಿ ಸುಧಾಮಣಿ ಮತ್ತು ಶ್ರೀ ಮಾಧವ ರಾವ್, ಧಾರವಾಡ
ಶ್ರೀ ಐ. ನಾರಾಯಣ ರಾವ್ ಮತ್ತು ಸಹೋದರ
ಶ್ರೀಮತಿ ಅನುಪಮಾ ಮತ್ತು ಶ್ರೀ ರವಿಶಂಕರ್ ರಾವ್
ಶ್ರೀಮತಿ ತುಳಸಿ ಮತ್ತು ಶ್ರೀ ಬಿ. ವಾಸುದೇವ ರಾವ್ ಹಾಗೂ ಮಕ್ಕಳು
ಶ್ರೀಮತಿ ಪ್ರಫುಲ್ಲ ಮತ್ತು ಶ್ರೀ ಕೃಷ್ಣ ಪಿ.ರಾವ್
ಶ್ರೀ ಶ್ರೀನಿವಾಸ ರಾವ್
ಶ್ರೀಮತಿ ಅರುಣಾ ಮತ್ತು ಶ್ರೀ ಸೋಮಶೇಖರ ರಾವ್

## ನೂತನ ವಧೂವರರಿಗೆ ಅಭಿನಂದನೆಗಳು




### ಚಿ। ಆಕಾಶ್ ಹಾಗೂ ಚಿ। ಸೌ। ನಿಶಾ


ತಾ.10.06.2022ನೇ ಶುಕ್ರವಾರ
ಉಡುಪಿ ಅಂಬಾಗಿಲಿನ "ಅಮೃತ್ ಗಾರ್ಡನ್"ನಲ್ಲಿ ಜರುಗಿದ
ವಿವಾಹ ಮಹೋತ್ಸವಕ್ಕೆ ಆಗಮಿಸಿ,
ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

ಶುಭ ಕೋರುವ

ಶ್ರೀಮತಿ ಡಾ। ಅಮಿತಾಶೋಭಾ ರಾವ್ ಮತ್ತು ಶ್ರೀ ಕೆ. ಚಂದ್ರಶೇಖರ ರಾವ್, ಮಣಿಪಾಲ
ಶ್ರೀಮತಿ ಮೀನಾ ಮತ್ತು ಶ್ರೀ ಕೈಲಾಶ್, ಮುಂಬಯಿ
ಶ್ರೀಮತಿ ವಸಂತಿ ರಾವ್ ಮತ್ತು ಶ್ರೀ ಸದಾಶಿವ ಎಂ.ರಾವ್, ತಂತ್ರಾಡಿ
ಡಾ। ಅನುಷಾ ರಾವ್, ಮಣಿಪಾಲ
ಶ್ರೀಮತಿ ಮಲ್ಲಿಕಾ ಮತ್ತು ಶ್ರೀ ಜಗದೀಶ ರಾವ್, ಸಹೋದರ-ಸಹೋದರಿಯರು, ಕರಂದಾಡಿ
ಶ್ರೀಮತಿ ಸುಲೋಚನಾ ಮತ್ತು ಶ್ರೀ ರಾಮಮೋಹನ್ ರಾವ್
ಸಹೋದರ-ಸಹೋದರಿಯರು, ಕರಂದಾಡಿ

With Best Compliments From :

BUILDING DREAMS, ENHANCING LIVES.



NAKSHATRA
GANDHINAGAR
SOLITAIRE
HATHILL,
HABITAT ONE 54
An Urban Lifestyle
DEREBAIL
ANANTESSH
CAR STREET,
Land® Trades
BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :

Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org